# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE Vol XXI - 1 ಜನವರಿ 2003

## ಈ ಸಂಚಿಕೆಯಲ್ಲಿ


ಅಸೋಸಿಯೇಷನ್‌ನಲ್ಲಿ 2

ನ್ಯಾಯಮೂರ್ತಿ ಶ್ರೀಕೃಷ್ಣ ಅವರಿಗೆ ಸನ್ಮಾನ

ಯುವ ಸಂಗೀತ ಸಮ್ಮೇಳನ • ರಮಾ ವಸಂತ್ ಮತ್ತು ಭವಾನಿ 6

ಹೊಸ ಬದುಕು ಹಳೆ ಮಾತು • ಪ್ರೊ. ವಸಂತ ಕುಷ್ಟಗಿ 5

Evolution of Carnatic Music from "Bombay" to "Mumbai" • **Lalitha & Geetha** 13

ಕೃತಿ ಪರಿಶೀಲನೆ :

ಗೋದಾವರಿ ವರಂ ಇರ್ದ ಕನ್ನಡ ನಾಡು • ಡಾ. ಎ. ಸುಬ್ಬಣ್ಣ ರೈ 14

ಮಾನಸಿಕ ಆರೋಗ್ಯದ ಸೂತ್ರಗಳು • ಡಾ. ಸಿ.ಆರ್. ಚಂದ್ರಶೇಖರ 15

ಸುತ್ತ-ಮುತ್ತ 15



**The Mysore Association, Mumbai**

393, Bhaudaji Road, Matunga, Mumbai-400 019.

Tel.: 402 46 47 • Grams: "KARUNADU"

# ನ್ಯಾಯಮೂರ್ತಿ ಸನ್ಮಾನ್ಯ ಬಿ. ಎನ್. ಶ್ರೀಕೃಷ್ಣ ಅವರಿಗೆ ಸನ್ಮಾನ

ಡಿಸೆಂಬರ್ 30ರಂದು ಮೈಸೂರ ಅಸೋಸಿಯೇಷನ್ ಹಾಗೂ ಮುಂಬೈಯಿನ ಕನ್ನಡ ಸಂಘ ಸಂಸ್ಥೆಗಳು ಸೇರಿ, ರಾಷ್ಟ್ರದ ಸರ್ವೋಚ್ಚನ್ಯಾಯಾಲಯದ ನ್ಯಾಯಾಧೀಶರಾಗಿ ನೇಮಕಗೊಂಡಿರುವ ಜಸ್ಟಿಸ್ ಬಿ. ಎನ್. ಶ್ರೀಕೃಷ್ಣ ಅವರಿಗೆ ಒಂದು ಸನ್ಮಾನ ಸಮಾರಂಭವನ್ನು ಏರ್ಪಡಿಸಿದ್ದವು. ಈ ಸಮಾರಂಭವು ಮಾತುಂಗಾದಲ್ಲಿರುವ ಮೈಸೂರು ಅಸೋಸಿಯೇಷನ್ನಿನ ಸಭಾಗೃಹದಲ್ಲಿ ನಡೆಯಿತು.




ಸನ್ಮಾನವೇರ್ಪಡಿಸಿದ್ದ ವಿವಿಧ ಸಂಘ ಸಂಸ್ಥೆಯ ಪ್ರತಿನಿಧಿಗಳು. ನ್ಯಾ! ಶ್ರೀ ಕೃಷ್ಣ ಅವರೊಡನೆ ವೇದಿಕೆಯ ಮೇಲೆ

ಅಂದು ಸಂಜೆ 7-00ಕ್ಕೆ ಪ್ರಾರಂಭವಾದ ಕಾರ್ಯಕ್ರಮದಲ್ಲಿ ಮೊದಲು ಆಮಂತ್ರಿತರೆಲ್ಲರೂ ಅಂದಿನ ಮುಖ್ಯ ಅತಿಥಿಯಾದ ನ್ಯಾಯಮೂರ್ತಿ ಶ್ರೀಕೃಷ್ಣ ಅವರೊಂದಿಗೆ ಔಪಚಾರಿಕವಾಗಿ ಮಾತುಕತೆ ನಡೆಸಲು ನೆರವಾಗುವಂತೆ ಒಂದು ಚಹಾ ಕೂಟವೇರ್ಪಡಿಸಲಾಗಿದ್ದಿತು. ನಂತರ 7-30ಕ್ಕೆ ಸಭಾಗೃಹದಲ್ಲಿ ಸನ್ಮಾನ ಕಾರ್ಯಕ್ರಮ ಪ್ರಾರಂಭವಾಯಿತು.

ಶ್ರೀಮತಿ ರಮಾವಸಂತ್ ಅವರು ಅಂದಿನ ಕಾರ್ಯಕ್ರಮವನ್ನು ನಿರ್ವಹಿಸಿದರು. ಸನ್ಮಾನ ಮಾಡುವ 24 ಸಂಘ ಸಂಸ್ಥೆಗಳು ಅಧ್ಯಕ್ಷರುಗಳನ್ನು ವೇದಿಕೆಗೆ ಕರೆದ ನಂತರ ನ್ಯಾಯಮೂರ್ತಿ ಶ್ರೀ ಕೃಷ್ಣ ಮತ್ತು ಅವರ ಪತ್ನಿ ಶ್ರೀಮತಿ ಪೂರ್ಣಿಮಾ ಅವರನ್ನು ಮೈಸೂರು ಅಸೋಸಿಯೇಷನ್ನಿನ ಅಧ್ಯಕ್ಷರಾದ ಶ್ರೀ ದೊರೆಸ್ವಾಮಿ ವೇದಿಕೆಗೆ ಕರೆತಂದರು. ಕಾರ್ಯಕ್ರಮವು ಮೈಸೂರು ಸಂಗೀತ ವಿದ್ಯಾಲಯದ ವಿದ್ಯಾರ್ಥಿಗಳ ಪ್ರಾರ್ಥನೆಯಿಂದ ಆರಂಭವಾಯಿತು

ಮೈಸೂರು ಅಸೋಸಿಯೇಷನ್ನಿನ ಅಧ್ಯಕ್ಷರಾದ ಶ್ರೀ ದೊರೆಸ್ವಾಮಿಯವರು ಸಂಸ್ಥೆಗಳ ಪರವಾಗಿ ಎಲ್ಲರನ್ನೂ ಸ್ವಾಗತಿಸಿದರು. ನಂತರ ವಿವಿಧ ಸಂಘ ಸಂಸ್ಥೆಗಳ ಪರವಾಗಿ ಕೆಲವರು ಮಾತನಾಡಿದರು.

ಎನ್.ಕೆ.ಇ.ಎಸ್. ಶಾಲೆಯ ಪರವಾಗಿ ಶ್ರೀ ಸುಬ್ರಮಣಿ ಅವರು ಮಾತಾಡಿ ತಮ್ಮ ಶಾಲೆಯಲ್ಲಿ ವಿದ್ಯಾರ್ಥಿಯಾಗಿ, ನಂತರ ಅಧ್ಯಕ್ಷರಾಗಿದ್ದ ಶ್ರೀಕೃಷ್ಣ ಅವರು ಇಂದು ಈ ಉಚ್ಚ ಸ್ಥಾನಕ್ಕೆ ನೇಮಕವಾಗಿರುವುದು ಇಡೀ ಶಾಲೆಗೆ ಹೆಮ್ಮೆಯ ವಿಷಯ ಎಂದರು.

ಸತ್ಯಧ್ಯಾನ ವಿದ್ಯಾಪೀಠದ ಕುಲಪತಿಗಳಾದ ಶ್ರೀ ವಿದ್ಯಾಸಿಂಹಾಚಾರ್ಯರು ನ್ಯಾ! ಶ್ರೀಕೃಷ್ಣ ಅವರ ವಿದ್ಯೆ, ವಿನಯ ಮತ್ತು ಶಿಸ್ತಿನ ಬಗ್ಗೆ ಮಾತನಾಡಿ, ಈ ಗುಣಗಳನ್ನು ಅವರಲ್ಲಿ ಬೆಳೆಸಿದ ಅವರ ತಾಯಿಯನ್ನು ಅಭಿನಂದಿಸಿದರು.

ಕರ್ನಾಟಕ ಸಂಘದ ಅಧ್ಯಕ್ಷರಾದ ರವಿ ರಾ. ಅಂಚನ್ ಅವರು ನ್ಯಾ! ಶ್ರೀ ಕೃಷ್ಣ ಅವರು ಮಾನವತ್ವಕ್ಕೆ ಕೊಟ್ಟಿರುವ ಬಗ್ಗೆ ಒತ್ತಿ ಮಾತನಾಡಿದರು.

ಮುಂಬೈ ವಿ.ವಿ. ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ! ಗಣೇಶ ಉಪಾಧ್ಯ ಅವರು ಶ್ರೀಕೃಷ್ಣ ಅವರಿಗೆ ವಿದ್ಯೆಯನ್ನು ಕಲಿಯುವುದರಲ್ಲಿರುವ ಅಪಾರ ಆಸಕ್ತಿ



ಎಲ್ಲ ಸಂಘ ಸಂಸ್ಥೆಗಳ ಪರವಾಗಿ ಸನ್ಮಾನ.

ಮತ್ತು ಉತ್ಸಾಹದ ಬಗ್ಗೆ ಮಾತನಾಡಿದರು.

ಇದಾದ ನಂತರ, ಸತ್ಯಧ್ಯಾನ ವಿದ್ಯಾಪೀಠದ ವಿದ್ಯಾರ್ಥಿಗಳಿಂದ ವೇದಮಂತ್ರಗಳ ಆಶೀರ್ವಚನದೊಂದಿಗೆ ಸನ್ಮಾನವು ಪ್ರಾರಂಭವಾಯಿತು. ಎಲ್ಲ ಸಂಘ ಸಂಸ್ಥೆಗಳ ಪರವಾಗಿ ತಯಾರಿಸಿದ್ದ ಸನ್ಮಾನ ಪತ್ರವನ್ನು ಮೈಸೂರು ಅಸೋಸಿಯೇಷನ್ನಿನ ಕಾರ್ಯದರ್ಶಿಗಳಾದ ಶ್ರೀ ಪ್ರಸಾದ್ ಅವರು ಓದಿದರು. ಮೈಸೂರು ಅಸೋಸಿಯೇಷನ್ನಿನ ಅಧ್ಯಕ್ಷರಾದ ಶ್ರೀ ದೊರೆಸ್ವಾಮಿಗಳು ಶ್ರೀಕೃಷ್ಣ ಅವರಿಗೆ ಎಲ್ಲ ಸಂಸ್ಥೆಗಳ ಪರವಾಗಿ ಶಾಲು ಹೊದೆಸಿ ಪುಷ್ಪಗುಚ್ಛವನ್ನು ಹಣ್ಣುಗಳನ್ನೂ ಕೊಟ್ಟು, ಸನ್ಮಾನದ ಪತ್ರದ ಸುರಳಿಯನ್ನು ಇಟ್ಟ ಬೆಳ್ಳಿಯ ಕ್ಯಾಸ್ಕೆಟ್ಟನ್ನೂ ಕೊಟ್ಟರು. ಶ್ರೀಮತಿ ಲಲಿತಾ ದೊರೆಸ್ವಾಮಿಯವರು ಶ್ರೀಕೃಷ್ಣ ಅವರ ಪತ್ನಿ ಶ್ರೀಮತಿ ಪೂರ್ಣಿಮಾ ಅವರಿಗೆ ಹೂವು ಹಣ್ಣುಗಳನ್ನು ಒಂದು ಬೆಳ್ಳಿಯ ವಿಗ್ರಹವನ್ನು ಎಲ್ಲರ ಪರವಾಗಿ ಸಮರ್ಪಿಸಿದರು.

ನಂತರ ವೇದಿಕೆಯ ಮೇಲಿದ್ದ ಎಲ್ಲ ಸಂಘ ಸಂಸ್ಥೆಯ ಪ್ರತಿನಿಧಿಗಳೂ ಶ್ರೀ ಕೃಷ್ಣ ಅವರಿಗೆ ಸನ್ಮಾನ ಸಲ್ಲಿಸಿದರು. ವೇದಿಕೆಯಲ್ಲಿರುವವರಲ್ಲದೆ ಸಭಾಗೃಹದಲ್ಲಿದ್ದ ಅನೇಕ ಸಂಘ ಸಂಸ್ಥೆಯ ಪ್ರತಿನಿಧಿಗಳು ಇದಾದನಂತರ ಶ್ರೀಕೃಷ್ಣ ಅವರಿಗೆ ತಮ್ಮ ಸನ್ಮಾನವನ್ನು ಸಲ್ಲಿಸಿದರು.

FOR ALL YOUR DOMESTIC AND INTERNATIONAL TRAVEL ARRANGEMENTS

*CONTACT*

**AUGUST TRAVEL SERVICE**

**Agents For INDIAN AIRLINES & JET AIRLINES**

REGD. OFFICE :
3/15, ASHIANA, SECTOR 17,
VASHI, NAVI MUMBAI
PHONES : 789 1970 • 789 1972
789 2451
GRAMS : AUGTRASERV

ALSO AT :
2/16, KABBUR HOUSE,
SION (E), MUMBAI-400 022.
PHONES : 407 2984 • 409 3573
407 7750

# FORTH COMING EVENTS AT THE MYSORE ASSOCIATION, BOMBAY

| Date | Time | Event | Venue |
|---|---|---|---|
| Tuesday 14/01/03 | 7.30 p.m. | Weekly Ganapathi Pooja<br>Ganapathi Sahasranamarachane<br>Severtha Rs. 25/- | Ground Floor |
| Saturday 18/01/03 | 7.00 p.m. | The Mysore Association, Bombay &<br>Dept. of Kannada, Mumbai University,<br>Present Mysore Association<br>Golden Jubilee Endowment<br>Lecture Series 2002-2003<br>Lecture on Visishta dvaita by<br>Prof. M.A. Lakshmitatachar | Conference Hall |
| Sunday 19/01/03 | 11.00 a.m. | Lecture on Visishtadvaita Lecture<br>by Prof. M.A. Lakshmitatachar | Conference Hall |
| 21/01/03 | 7.30 p.m. | Weekly Ganapathi Pooja<br>Angarika Sankashti<br>Ganapathi Sahasranamarchane<br>Sevartha Rs. 51/- | Ground Floor |
| Monday 27/01/03 | 7.30 p.m. | Play Reading | Ground Floor |
| Tuesday 28/01/03 | 7.30 p.m. | Weekly Ganapathi Pooja<br>Ganapathi Sahasranamarchane<br>Sevartha Rs. 25/- | Ground Floor |
| Tuesday 04/02/03 | 7.30 p.m. | Weekly Ganapathi Pooja<br>Ganapathi Sahasranamarchane<br>Sevartha Rs. 25/- | Ground Floor |
| Wednesday 05/02/03 | 5.00 p.m. | Maghi Ganapathi Pooja &<br>Satyanarayana Pooja<br>Mahaganapathi & Prasad Vinayoga<br>Sevartha Rs. 51/- | Ground Floor |
| Friday 07/02/03 | 7.00 p.m. | Sitar Recital by Chandrashekar Phanse<br>Demostration of VCD's on Indian Music by<br>Sangeetha Shankar<br>(Shivkumar Sharma, Veena Sahasrabudde,<br>Dr. N. Rajan & Zakir Hussain are participants<br>with VCD) | Conference Hall |




ಸತ್ಯಧ್ಯಾನ ವಿದ್ಯಾಪೀಠದ ಕುಲಪತಿ ವಿದ್ಯಾಸಿಂಹಾಚಾರ್ಯರು ಮಾತನಾಡುತ್ತಿರುವುದು.



ಬಿ.ಎಸ್.ಕೆ.ಬಿಯ ಅಧ್ಯಕ್ಷರಾದ ಶ್ರೀ ಉಡುಪ ಅವರು ನ್ಯಾ| ಶ್ರೀಕೃಷ್ಣರನ್ನು ಸನ್ಮಾನಿಸುತ್ತಿರುವುದು.



ನ್ಯಾ| ಶ್ರೀಕೃಷ್ಣ ಅವರು ಸಭೆಯ ಪರವಾಗಿ ಶ್ರೀಮತಿ ಶಾರದಮ್ಮ ನಿಗೆ ಪುಷ್ಪಗುಚ್ಛವನ್ನು ನೀಡುತ್ತಿರುವುದು.

# ಸನ್ಮಾನ ಪತ್ರ

ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ನೇಮಕಗೊಂಡಿರುವ ಬಹುಮುಖ ಪ್ರತಿಭೆಯ ನ್ಯಾಯಾಧೀಶ ಶ್ರೀ ಬಿ. ಎನ್. ಶ್ರೀಕೃಷ್ಣ ಅವರಿಗೆ ಮೈಸೂರು ಅಸೋಸಿಯೇಷನ್ ಹಾಗೂ ಮುಂಬಯಿ ಕನ್ನಡ ಸಂಘ ಸಂಸ್ಥೆಗಳು ಒಟ್ಟಾಗಿ ಆಯೋಜಿಸಿದ್ದ ಅಭಿನಂದನ ಕಾರ್ಯಕ್ರಮದಲ್ಲಿ ಅರ್ಪಿಸಿದ ಸನ್ಮಾನ ಪತ್ರ

ಸನ್ಮಾನ್ಯರೆ,

ತಾವು ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾಗಿ ನೇಮಕಗೊಂಡಿರುವುದು ಮುಂಬಯಿ ಕನ್ನಡಿಗರಿಗೆ ಅಭಿಮಾನದ ಸಂಗತಿ. ಜ್ಞಾನ, ವಿನಯ, ಸೌಜನ್ಯ, ಅಧಿಕಾರ, ಸೃಜನಶೀಲತೆಗಳು ಏಕತ್ರ ಕೂಡುವುದು ಬಹಳ ಅಪರೂಪ. ಅಂಥ ಪ್ರತಿಭಾಶೀಲ ವ್ಯಕ್ತಿತ್ವವನ್ನು ನೀವು ಮೈಗೂಡಿಸಿಕೊಂಡಿದ್ದೀರಿ. ಸಜ್ಜನತೆಗೆ ನೀವೊಂದು ಮಾದರಿ. ನಿಮ್ಮ ಕಾರ್ಯ ಕ್ಷೇತ್ರದಲ್ಲಿ ನೀವು ತೋರುವ ಧೈರ್ಯ, ತಾಳುವ ನಿಲುವು, ಅನುಕರಣೀಯ ಅಂಶ. ಸಂಗೀತ, ಸಾಹಿತ್ಯ, ಕಲೆ, ಶಿಕ್ಷಣ ಮತ್ತು ಆಧ್ಯಾತ್ಮ ಹೀಗೆ ನಿಮ್ಮ ವ್ಯಕ್ತಿತ್ವ ಶ್ರೀಮಂತವಾದುದು.

ಕೇರಳ ರಾಜ್ಯದ ಉಚ್ಚ ನ್ಯಾಯಾಲಯದ ಮುಖ್ಯನ್ಯಾಯಮೂರ್ತಿಗಳಾಗಿ ನಿಯುಕ್ತಿಗೊಂಡ ಕೆಲಕಾಲದಲ್ಲೇ ನೀವು ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾಗಿ ನೇಮಕಗೊಂಡಿರುವುದು ನಿಮ್ಮ ಕೃತುಶಕ್ತಿಗೆ ಸಾಕ್ಷಿ. ಬಹು ಭಾಷಾವಿಶಾರದರೂ, ವಿದ್ಯಾಭಿಮಾನಿಗಳೂ, ಸಮಾಜಸೇವಾಸಕ್ತರೂ ಆಗಿರುವ ನಿಮ್ಮಿಂದ ರಾಷ್ಟ್ರಕ್ಕೆ ಇನ್ನಷ್ಟು ಸೇವೆ ಸಲ್ಲಲಿ ಎಂದು ಮುಂಬಯಿ ಕನ್ನಡಿಗರ ಪರವಾಗಿ ಮನಸಾ ಹಾರೈಸುತ್ತಿದ್ದೇವೆ.

ಮುಂಬಯಿ ಕನ್ನಡ ಸಂಘ ಸಂಸ್ಥೆಗಳ ಪರವಾಗಿ ತಮಗೆ
ಈ ಸನ್ಮಾನ ಪತ್ರ.

| | |
|---|---|
| ಎಸ್. ದೊರೆಸ್ವಾಮಿ<br>ಅಧ್ಯಕ್ಷರು<br>ಮೈಸೂರು ಅಸೋಸಿಯೇಷನ್, ಮುಂಬಯಿ | ಸೋಮವಾರ<br>30.12.2002 |

| | |
|---|---|
| ಮೈಸೂರು ಅಸೋಸಿಯೇಷನ್ | ರಾಷ್ಟ್ರೀಯ ಕನ್ನಡ ಶಿಕ್ಷಣ ಸಮಿತಿ |
| ಕರ್ನಾಟಕ ಸಂಘ, ಮಾಹಿಮ್ | ಬಿ.ಎಸ್.ಕೆ.ಬಿ. ಅಸೋಸಿಯೇಷನ್ |
| ಮೊಗವೀರ ವ್ಯವಸ್ಥಾಪಕ ಮಂಡಳಿ | ಬಿಲ್ಲವರ ಅಸೋಸಿಯೇಷನ್, ಸಾಂತಾಕ್ರೂಜ್ |
| ಬಂಟರ ಸಂಘ | ಕುಲಾಲ ಸಂಘ |
| ದೇವಾಡಿಗ ಸಂಘ, ಮುಂಬಯಿ | ಕನ್ನಡ ಸಂಘ, ಮಾತುಂಗ |
| ಚೆಂಬೂರು ಕರ್ನಾಟಕ ಸಂಘ | ಕನ್ನಡ ಕಲಾ ಕೇಂದ್ರ |
| ಸತ್ಯಧ್ಯಾನ ವಿದ್ಯಾಪೀಠ | ವಿದ್ಯಾಪ್ರಸಾರಕ ಮಂಡಳಿ |
| ಮೈಸೂರು ಸಂಗೀತ ವಿದ್ಯಾಲಯ | ಕರ್ನಾಟಕ ಸಂಘ, ಡೊಂಬಿವಲಿ |
| ನವಿಮುಂಬೈ ಕನ್ನಡ ಸಂಘ | ಕನ್ನಡ ವಿಭಾಗ ಮುಂಬೈ ವಿಶ್ವವಿದ್ಯಾಲಯ |
| ಬಸವೇಶ್ವರ ಫಿಲಾಸಾಫಿಕಲ್ ಸೊಸೈಟಿ | ಗೋರೆಗಾಂವ್ ಕರ್ನಾಟಕ ಸಂಘ |
| ಕನ್ನಡ ಭವನ ಸೊಸೈಟಿ | ದೇವಾಡಿಗ ವೆಲ್‌ಫೇರ್ ಅಸೋಸಿಯೇಶನ್ |
| ಕನ್ನಡ ವನಿತಾ ಸಮಾಜ | ಕನ್ನಡ ಸಾಹಿತ್ಯ ಪರಿಷತ್ತು ಮುಂಬಯಿ ಘಟಕ |

ನ್ಯಾ| ಶ್ರೀ ಕೃಷ್ಣ ಅವರು ತಮ್ಮ ಭಾಷಣದಲ್ಲಿ, ತಾವು ಇಂದು ಜೀವನದಲ್ಲಿ ಏನಾದರೂ ಸಾಧನೆ ಮಾಡಿದ್ದರೆ, ಅದರ ಯಶಸ್ಸಿಗೆ ಕಾರಣ ತಮ್ಮ ಮಾತಾಪಿತರ ಆಶೀರ್ವಾದ, ಗುರುಹಿರಿಯರ ಮಾರ್ಗದರ್ಶನ ಮತ್ತು ಆಶೀರ್ವಾದ ಎಂದು ವಿನೀತರಾಗಿ ಹೇಳಿದರು. ಕಲ್ಲಿಗೆ ಸಿಂಧೂರ ಬಳಿದು, ಪ್ರಾಣ ಪ್ರತಿಷ್ಠೆ ಮಾಡಿದಾಗ ಅದಕ್ಕೊಂದು ಶಕ್ತಿ ಬರುವಂತೆಯೇ ನನಗೆ ಸಾಧನೆ ಮಾಡುವ ಶಕ್ತಿ ಬಂದದ್ದು ಗುರುಹಿರಿಯರಿಂದ ಎಂದು ಹೇಳಿದರು. ವೃತ್ತಿಯನ್ನು ಸೇವಾ ಮನೋಭಾವದಿಂದ ನಡೆಸಬೇಕು, ವ್ಯಾಪಾರದಂತೆ ಲಾಭದ ಉದ್ದೇಶವನ್ನಿಟ್ಟುಕೊಂಡು ನಡೆಸಬಾರದು ಎಂದರು.

ಶ್ರೀಕೃಷ್ಣ ಅವರ ತಾಯಿ ಶ್ರೀಮತಿ ಶಾರದಮ್ಮ ನವರನ್ನು ಈ ಸಂದರ್ಭದಲ್ಲಿ ಗೌರವಿಸಲಾಯಿತು. ಪುಷ್ಪ ಗುಚ್ಛವನ್ನು ಶ್ರೀ ಕೃಷ್ಣ ಅವರು ತಾವೇ ಸಭೆಯ ಪರವಾಗಿ ತಮ್ಮ ತಾಯಿಗೆ ಕೊಟ್ಟರು.

ಮೈಸೂರು ಅಸೋಸಿಯೇಷನ್ನಿನ ಕಾರ್ಯದರ್ಶಿ ಗಳಾದ ಶ್ರೀ ಪ್ರಸಾದ್ ಅವರು ಎಲ್ಲರ ಪರವಾಗಿ ವಂದನಾರ್ಪಣೆಯನ್ನು ಸಲ್ಲಿಸಿದರು.

## ಅಭಿನಂದನೆಯ ಸಂದೇಶ

ನ್ಯಾ| ಶ್ರೀಕೃಷ್ಣ ಅವರಿಗೆ ಸನ್ಮಾನ ಏರ್ಪಡಿಸಿದ್ದೀವಿ ಅಂತ ತಿಳಿದ ಮೇಲೆ ನಮ್ಮ ಹಿರಿಯ ಸದಸ್ಯೆಯರಾದ ಸೀತಮ್ಮ ರಾವ್ ಅವರಿಗೆ ಅಪಾರ ಸಂತೋಷ. ''ನಮ್ಮ ಕಣ್ಮುಂದೆ ಬೆಳೆದ ಹುಡುಗ ಇವತ್ತು ಇಷ್ಟೊಂದು ಸಂಘ ಸಂಸ್ಥೆಗಳಿಂದ ಸನ್ಮಾನ ಮಾಡಿಸ್ಕೋಳ್ಳೊ ಅಷ್ಟು ದೊಡ್ಡ ಸಾಧನೆ ಮಾಡಿದ್ದಾನೆ ನೋಡಿ'' ಅಂತ ಬಹಳ ಹೆಮ್ಮೆ ಮತ್ತು ಅಭಿಮಾನ. ಸನ್ಮಾನ ಸಮಾರಂಭಕ್ಕೆ ಅವರು ಪುಷ್ಪಗುಚ್ಛದ ಜೊತೆ ತಮ್ಮದೇ ಆದ ಅಭಿನಂದನೆಯ ಆಶೀರ್ವಾದದ ಸಂದೇಶವನ್ನು ಬರೆದು ತಂದರು. ಅದನ್ನು ಇಲ್ಲಿ ಪ್ರಕಟಿಸಿದ್ದೇವೆ.

ಎಂಥಾ ಪುಣ್ಯವೆ ಗೋಪಿ ಎಂಥಾ ಭಾಗ್ಯವೆ ಯಶೋದ
ಇಂಥಾ ಮಗನನ್ನು ಪಡೆದೆ ಎಂದು ಹೇಳಿರುವ ಪುರಂದರ
ದಾಸ ವಾಣಿಯಂತೆ ವಿಶ್ವ ದಾದ್ಯಂತವಿರುವ ಕನ್ನಡಿಗರಿಗೆ
''ಶ್ರೀಕೃಷ್ಣ''ನಂತಹ ''ಅನರ್ಘ್ಯವಾದ' ಮತ್ತು ''ಅತ್ಯಮೂಲ್ಯವಾದ''
ಪುತ್ರ 'ರತ್ನ'ವನ್ನು ಕೊಡುಗೆಯಾಗಿ ಕೊಟ್ಟಿರುವ ಶ್ರೀಮತಿ
ಶ್ರೀಮತಿ ಶಾರದಮ್ಮ ಬಿ.ಎಸ್. ಅವರಿಗೆ ಅಭಿನಂದನೆಯನ್ನು
ಸಲ್ಲಿಸಿ, ನಮ್ಮ ಕನ್ನಡಿಗರ ಹಿರಿಮೆಯ ''ಶ್ರೀಕೃಷ್ಣ''ನಿಗೆ
ಅಭಿನಂದನೆಯೊಂದಿಗೆ ಆಶೀರ್ವದಿಸುತ್ತೇನೆ.
ದುಷ್ಟ ನಿಗ್ರಹ ಮತ್ತು ಶಿಷ್ಟ ಪರಿಪಾಲಕ ನಾದ ತ್ರಿಲೋಕದೊಡೆಯ
ಉಚ್ಚ ನ್ಯಾಯಾಲಯದ, ಏಕೈಕ ನ್ಯಾಯ ಮೂರ್ತಿ, ದೇವಾಧಿದೇವತಾ
''ಚಕ್ರವರ್ತಿ'' ಶ್ರೀಕೃಷ್ಣ ಪರಮಾತ್ಮನ ದಿವ್ಯಾನುಗ್ರಹ, ಭಾರತದ
ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾದ ಶ್ರೀ ಕೃಷ್ಣ ನಿನಗೆ ಮತ್ತು
ನಿನ್ನ ಸಹಧರ್ಮಿಣಿ ಸೌ|| ಪೂರ್ಣಿಮಾಗೆ ಮತ್ತು ನಿನ್ನ ಕುಟುಂಬಕ್ಕೆ ಸೇರಿದವರಿಗೆ ಪ್ರಾಪ್ತಿಯಾಗಲಿ.
''ಕೃಷ್ಣ'' ಭಾರತದ ಪ್ರಜೆ ಮತ್ತು ಮುಖ್ಯ ನ್ಯಾಯಾಧೀಶನಾದ ನೀನು, ಕೀರ್ತಿಶಾಲಿ ಮತ್ತು ಕ್ರಿಯಾಶಾಲಿಯಾಗಿ, ಇದುವರೆವಿಗೂ ನಡೆದು ಬಂದ ಪಥದಿಂದಲೆ, ಅಂದರೆ (ದುಷ್ಟನಿಗ್ರಹ ಮತ್ತು ಶಿಷ್ಟರಕ್ಷಣೆಯ ಧರ್ಮವನ್ನು) ಮುಂದೆಯೂ ನಿರ್ಭಯನಾಗಿ, ನಿಷ್ಪಕ್ಷಪಾತಿಯಾಗಿ, ನಿರಂತರವಾಗಿ ಮುನ್ನಿನ ಪಥದಿಂದಲೆ ಮುಂದುವರಿದು ಯಶಸ್ವಿಯಾಗುವಂತೆ ಮಹಾನುಭಾವನಾದ ಭಗವಂತನ ಅನುಗ್ರಹ ವಿರಲಿ.
ಕೃಷ್ಣ ನನ್ನೀ ಶುಭ ಹಾರೈಕೆ ಮತ್ತು ಹೃತ್‌ಪೂರ್ವಕವಾದ
ಆಶೀರ್ವಾದ ನಿನಗೆ ಅನುಗಾಲವಿರಲಿ

-- ಶ್ರೀಮತಿ ಸೀತಮ್ಮ ಆರ್. ರಾವ್

## ಹೊಸ ಬದುಕು - ಹಳೆ ಮಾತು

ಪ್ರೀತಿ ಪ್ರೀತಿ ಪ್ರೀತಿ
ಪ್ರೀತಿ ಮಾಡಬೇಡಿರೋ, ಮಾಡಿಕೆಡಬೇಡಿರೋ
ಕೆಟ್ಟು ನೋಯ ಬೇಡಿರೋ, ಹೀಗೆಲ್ಲ ಅಂದಾಡಬೇಡಿರೋ
ಅಂದರೇನು ಬಿಟ್ಟರೇನು, ಪ್ರೀತಿಯೊಂದೇ ಗತಿಯು ಕಾಣಿರೋ
ಪ್ರೀತಿಯೊಂದೇ ಗತಿಯು ಕಾಣಿರೋ ||

ಪ್ರೀತಿ ಪ್ರೀತಿ ಪ್ರೀತಿ
ಆನೆಗಾತ್ರದ ಪ್ರೀತಿಗೆ, ನೋವು ನಲಿವನು ತುಂಬಲು
ಗುಬ್ಬಿ ಹೃದಯವು ಸಾಲದು, ಸೋರಲೇಳು ಎಂದರೆ
ನೆಲದ ಅಂಚನೇ ನುಂಗಿದೆ, ಬಾನ ನೆಲಿಗೂ ಚಾಚಿದೆ;
ಪ್ರೀತಿಯೊಂದೇ ಗತಿಯು ಕಾಣಿರೋ ||

ಪ್ರೀತಿ ಪ್ರೀತಿ ಪ್ರೀತಿ
ಬೆಲ್ಲ ಜೇನಿನ ಹಾಲಲಿ, ಕೆಸರು ತಾನುದು ಗುಟ್ಟಿಗೆ
ಕೂಡಿಸವಿಯಲು ಬಟ್ಟಿಗೆ, ಬಂತು ನೋಡಲು ಒಪ್ಪಿಗೆ
ಸಂಸಾರದೀ ಬಿತ್ತಿಗೆ, ಹಾಸು ತ್ಯಾಗದ ಹಾಸಿಗೆ,
ಪ್ರೀತಿಯೊಂದೇ ಗತಿಯು ಕಾಣಿರೋ ||

ಪ್ರೀತಿ ಪ್ರೀತಿ ಪ್ರೀತಿ
ಕೊಟ್ಟು ಕೊಸೆವ ರೀತಿಗೆ, ನದರಾಗದಿರಲೀ ಪ್ರೀತಿಗೆ,
ಯಾರು ಹೆಚ್ಚು ಯಾರು ಕಡಮೆ, ಯಾರು ಕೆಳಗೆ ಯಾರು ಮೇಲೆ
ಪ್ರೀತಿ ಬಿಗಿದಾ ನೆಲೆಯಲಿ, ಬಾನು ಬುವಿಯೇ ಹಂದಿರ
ಕಾಮದಿರಲದು ಯಾರಿಗೆ, ಹೊದಿಸು ವಿಶ್ವಾಸದ ಹೊಚ್ಚಿಗೆ
ನಮ್ಮ ಬದುಕಿನ ಹೊತ್ತಿಗೆ;
ಪ್ರೀತಿಯೊಂದೇ ಗತಿಯು ಕಾಣಿರೋ ||

ಪ್ರೀತಿ ಪ್ರೀತಿ ಪ್ರೀತಿ
ಯುವಕರೇನು ಮುದುಕರೇನು
ಚಿಗುರೆಲೆ ಹಣ್ಣೆಲೆ ಎಂದಾಡಬೇಡಿರೋ
ಪ್ರೀತಿಯೆಂಬ ನೀತಿಗೆ ಏನು ಹೆಚ್ಚು ಏನು ಕಮ್ಮಿ
ಹಳೇ ಮಾತಿದು ಎಂದಾಡಬೇಡಿರೋ
ಅದೇ ಹೊಸತು ಹೊಸತು ಬದುಕಿ
ಇದನೆ ನಂಬಿ ನಡೆಯಿರೋ ನೆಪ್ಪನಿಂದ ತಪ್ಪಗೆ
ಪ್ರೀತಿಯೊಂದೇ ಗತಿಯು ಕಾಣಿರೋ ||

ಪ್ರೀತಿ ಪ್ರೀತಿ ಪ್ರೀತಿ
ಪ್ರೀತಿ ಮಾಡಬೇಡಿರೋ, ಮಾಡಿಕೆಡಬೇಡಿರೋ
ಕೆಟ್ಟು ನೋಯಬೇಡಿರೋ, ಹೀಗೆಲ್ಲಾ ಅಂದಾಡಬೇಡಿರೋ
ಅಂದರೇನುಬಿಟ್ಟರೇನು, ಪ್ರೀತಿಯೊಂದೇ ಗತಿಯು ಕಾಣಿರೋ
ಪ್ರೀತಿಯೊಂದೇ ಗತಿಯು ಕಾಣಿರೋ ||

-- ಪ್ರೊ. ವಸಂತ ಕುಷ್ಟಗಿ

# ಮೈಸೂರು ಅಸೋಸಿಯೇಷನ್ ಮತ್ತು ಕರ್ನಾಟಕ ಗಾನ ಕಲಾ ಪರಿಷತ್

## ಜೊತೆಗೂಡಿ ಏರ್ಪಡಿಸಿದ

# ಯುವ ಸಂಗೀತ ಸಮ್ಮೇಳನ

### ಸಂತಸದ ಹೊಳೆಯ ಸಂಗೀತೋತ್ಸವ

ಮಧು ಹೂವ್ವಿಗೆ ಹೇಳಾಯ್ತಾ?,ರಾಘು ಕಾಫಿ, ಟೀ ಎಲ್ಲ ರೆಡಿ ಆಯ್ತಾ ? ಶಾಂತೇಶ್, ಮೇಳದ ಕ್ಯಾಸೆಟ್ ಇದೆಯಾ? ರಂಗೋಲಿ ಹಾಕುವವರು ಬಂದರಾ? ಹೀಗೆ ಹಲವಾರು ಧ್ವನಿಗಳು ಅಸೋಸಿಯೇಷನ್ನಿನ ಆವರಣದಲ್ಲಿ, ತಳಿರು ತೋರಣ, ಬಣ್ಣ ಬಣ್ಣದ ರಂಗೋಲಿ ಮಂಗಳವಾದ್ಯ ಒಳ್ಳೆ ಮದುವೆ ಮನೆಯ ಸಡಗರ, ಈ ಸಡಗರ ಕಾರಣ? ಜನವರಿ 4 ಮತ್ತು 5ರಂದು ಮುಂಬೈನ ಮೈಸೂರು ಅಸೋಸಿಯೇಷನ್ ಮತ್ತು ಬೆಂಗಳೂರಿನ ಗಾನ ಕಲಾ ಪರಿಷತ್ ಎರಡು ಸಂಸ್ಥೆಗಳು ಸ್ನೇಹಭಾವದಿಂದ ಸೇರಿ 'ಯುವ ಕಲಾವಿದರ ಸಂಗೀತ ಸಮ್ಮೇಳನ'ದ ಕಾರ್ಯಕ್ರಮವನ್ನು ಆಯೋಜಿಸಿದ್ದರು. ಈ ಕಾರ್ಯಕ್ರಮದಲ್ಲಿ ಯುವ ಕಲಾವಿದರ ಕಲಿಕೆಗೆ ಹೆಚ್ಚು ಅನುಕೂಲವಾಗುವಂತೆ ಪ್ರಾಕ್ಟಿಕತೆಗೆ ಹೆಚ್ಚು ಪ್ರಾಮುಖ್ಯವನ್ನು ಕೊಡಲಾಗಿತ್ತು. ಸಂಗೀತ ಪ್ರಪಂಚದ ದಿಗ್ಗಜಕಲಾವಿದರು ಭಾಗವಹಿಸಿದ್ದರು. ಕರ್ನಾಟಕ ಗಾನ ಕಲಾ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಎ. ಎಚ್. ರಾಮರಾವ್, ಶ್ರೀ ಮೈಸೂರು ಸುಬ್ರಹ್ಮಣ್ಯ, ಶ್ರೀ ಆರ್. ಕೆ. ಪದ್ಮನಾಭ, ಶ್ರೀಮತಿ ಡಾ. ಸುಕನ್ಯ ಪ್ರಭಾಕರ್, ಶ್ರೀ ಬೆಂಗಳೂರು ವೆಂಕಟರಾಂ, ಶ್ರೀಮತಿ ಜಿ. ಆರ್. ಜಯಾ ಕಾಸರವಳ್ಳಿ ಸಹೋದರಿಯರು, ಶ್ರೀ ವಿಜಯ ಶಿವ, ಶ್ರೀಮತಿ ಜಯಶ್ರೀ ಮಹೇಶ್, ಶ್ರೀಮತಿ ಅನುರಾಧ ಪಾಲ್, ಶ್ರೀ ಬಾಳಾಸಾಯಿ ಮತ್ತು 'ಗಾನಕಲಾಶ್ರೀ' ಪ್ರಶಸ್ತಿ ವಿಜೇತ ಶ್ರೀ ಪ್ರವೀಣ ಅವರು ಆಗಮಿಸಿದ್ದರು. ಈ ಕಾರ್ಯಕ್ರಮದ ಜೊತೆಗೆ ಹಿರಿಯ ಸಂಗೀತಗಾರರ ಚಿತ್ರಗಳ ಚಿತ್ರಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮವು ಸರಿಯಾಗಿ 11 ಘಂಟೆಗೆ ಆರಂಭವಾಯಿತು. ಸಮ್ಮೇಳನದ ಉದ್ಘಾಟಕರಾಗಿ ಕರ್ನಾಟಕ ರಾಜ್ಯದ ಕನ್ನಡ ಮತ್ತು ಸಾಂಸ್ಕೃತಿಕ ಇಲಾಖೆಯ ಸಚಿವೆ ಶ್ರೀಮತಿ ರಾಣಿ ಸತೀಶ್‌ರವರನ್ನು ಚಿತ್ರ ಪ್ರದರ್ಶನದ ಉದ್ಘಾಟಕರಾಗಿ ಶ್ರೀ ಷಣ್ಮುಖಾನಂದ ಸಭೆಯ ಪದಾಧಿಕಾರಿಗಳಾದ ಶ್ರೀ ಶೇಷಾದ್ರಿ ಅವರನ್ನು ಆಹ್ವಾನಿಸಲಾಗಿತ್ತು.

ಆರಂಭಕ್ಕೆ ಕಾಸರವಳ್ಳಿ ಸಹೋದರಿಯರಾದ ಶ್ರೀಮತಿ ರೂಪ ಮತ್ತು ದೀಪ ಅವರಿಂದ ಪ್ರಾರ್ಥನಾ ಗೀತೆ ಆಯಿತು. ನಂತರ ಮೈಸೂರು ಅಸೋಸಿಯೇಷನ್ನಿನ ಅಧ್ಯಕ್ಷರಾದ ಶ್ರೀ ಎಸ್. ದೊರೆಸ್ವಾಮಿ ಅವರು ಅತಿಥಿಗಳನ್ನು, ಸಭಿಕರನ್ನು ಸ್ವಾಗತಿಸಿದರು. ಗಾನ ಕಲಾ ಪರಿಷತ್ತಿನ ಶ್ರೀ ರಾಮರಾವ್ ಅವರು ಮತ್ತು ಮೈಸೂರು ಅಸೋಸಿಯೇಷನ್ನಿನ ಶ್ರೀ ಮಂಜುನಾಥಯ್ಯನವರು ಪ್ರಸ್ತಾವನ ಭಾಷಣವನ್ನು ಮಾಡಿದರು. ಶ್ರೀಮತಿ ರಾಣಿ ಸತೀಶ್ ಅವರು ದೀಪವನ್ನು ಬೆಳಗಿಸಿ ಸಮ್ಮೇಳನದ ಉದ್ಘಾಟನೆಯನ್ನು ಮಾಡಿದರು. ಶ್ರೀ ಶೇಷಾದ್ರಿಯವರು ಚಿತ್ರ ಪ್ರದರ್ಶನದ ಉದ್ಘಾಟನೆಯನ್ನು ಮಾಡಿದರು. ಶ್ರೀಮತಿ ರಾಣಿ ಸತೀಶ್‌ರವರು ಮಾತನಾಡಿ ಇಂದಿನ ಯುವಕರು ಸಾಂಸ್ಕೃತಿಕ ರಾಯಭಾರಿಗಳಾಗಬೇಕು, ಉತ್ತಮ ಸಂಸ್ಕಾರದ ಮೂಲಕ ಬದುಕಿನ ವಿಸ್ತಾರವನ್ನು ಕಂಡುಕೊಳ್ಳಬೇಕು ಎಂದರು. ಕರ್ನಾಟಕ ಸರ್ಕಾರವು ಒಂದು ಕೋಟಿ ರೂ. ವೆಚ್ಚದಲ್ಲಿ ದಾಸ ಸಾಹಿತ್ಯದ 39 ಸಂಪುಟಗಳನ್ನು ಹೊರತರಲಿದೆ ಎಂದು ತಿಳಿಸಿದರು. ನಂತರ ಮೃದಂಗ ವಾದನದಲ್ಲಿ ವಿಖ್ಯಾತರಾಗಿ ಗುರಿಯನ್ನು ತಲುಪಿ ಸಾಧನೆಗೈದ ಮುಂಬೈ ಯುವ ಕಲಾವಿದರ ಸಮ್ಮೇಳನದ ಅಧ್ಯಕ್ಷರಾದ ಮೃದಂಗ ವಿದ್ವಾನ್ ಶ್ರೀ ಬೆಂಗಳೂರು ಪ್ರವೀಣ್ ಅವರಿಗೆ ಶ್ರೀಮತಿ ರಾಣಿ ಸತೀಶ್ ಅವರು ''ಗಾನ ಕಲಾ ಶ್ರೀ'' ಬಿರುದನ್ನು ನೀಡಿ ಶಾಲು ಹೊದಿಸಿ ಫಲಪುಷ್ಪ ಸಮರ್ಪಣೆ ಮಾಡಿ ಸನ್ಮಾನಿಸಿದರು. ಅಸೋಸಿಯೇಷನ್ನಿನ ಅಧ್ಯಕ್ಷರಾದ ದೊರೆ ಸ್ವಾಮಿಯವರು ಪ್ರವೀಣ್



*ಕರ್ನಾಟಕ ಸರಕಾರದ ಸಚಿವೆ ಶ್ರೀಮತಿ ರಾಣಿ ಸತೀಶ್ ಸಮ್ಮೇಳನವನ್ನು ಉದ್ಘಾಟಿಸುತ್ತಿರುವುದು.*



*ಶ್ರೀ ಶೇಷಾದ್ರಿ ಚಿತ್ರ ಪ್ರದರ್ಶನವನ್ನು ಉದ್ಘಾಟಿಸಿರುವುದು.*



*ಸಚಿವೆ ಶ್ರೀಮತಿ ರಾಣಿ ಸತೀಶ್‌ರವರ ಉದ್ಘಾಟನಾ ಭಾಷಣ.*

ಅವರನ್ನು ಶಾಲು ಹೊದಿಸಿ ಫಲ ತಾಂಬೂಲದ ಜೊತೆಗೆ ನೆನಪಿನ ಕಾಣಿಕೆಯನ್ನು ನೀಡಿ ಸನ್ಮಾನಿಸಿದರು. ನಂತರ ಶ್ರೀ ಪ್ರವೀಣ್ ಅವರು ತುಂಬು ಹೃದಯದಿಂದ ಸಂತೋಷಭರಿತರಾಗಿ ಸಭೆಯನ್ನುದ್ದೇಶಿಸಿ ಮಾತನಾಡಿದರು. ಸಮ್ಮೇಳನದ ಅಧ್ಯಕ್ಷ ಶ್ರೀ ಪ್ರವೀಣ್ ಅವರು ಮಾತನಾಡಿ ಸಂಗೀತವು ನಿರಂತರ ಹರಿಯುವ ನದಿ ನೀರಿನಂತೆ ದೈವದತ್ತವಾಗಿ ಬಂದ ಈ ಕಲೆಯನ್ನು ಉಳಿಸಿ ಬೆಳೆಸಿಕೊಂಡು ಹೋಗುವುದು ಕಲಾವಿದರು, ಕಲೆಯನ್ನು ಪೋಷಿಸುತ್ತಿರುವ ಸಂಸ್ಥೆಗಳು, ಸರಕಾರ, ಕಲಾಭಿಮಾನಿಗಳು ಮತ್ತು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಒಬ್ಬ ಕಲಾವಿದ ಶ್ರೇಷ್ಠ ದರ್ಜೆಯ ಕಲಾವಿದನಾಗಿ ರೂಪುಗೊಳ್ಳಬೇಕೆಂದರೆ ಆತನಿಗೆ ಕಲಿಯುವ ಆಕಾಂಕ್ಷೆ ಮತ್ತು ಶ್ರದ್ಧೆಗಳಿರಬೇಕು, ಸಂಗೀತ ವಿದ್ಯಾರ್ಜನೆ ಮಾಡುವ ವ್ಯಕ್ತಿ ಸುಖಭೋಗಗಳನ್ನು ತ್ಯಜಿಸಿದರೆ ಮಾತ್ರ ಸಾಧ್ಯ. ಇಂದಿನ ಯುವ ಪೀಳಿಗೆಯವರು ಕರ್ಕಶ ಸಂಗೀತವನ್ನು ಬದಿಗಿರಿಸಿ ಉತ್ತಮವಾದ ಶಾಸ್ತ್ರೀಯ ಸಂಗೀತವನ್ನು ಕೇಳಬೇಕು ಮತ್ತು ಕಲಿಯಬೇಕು ಎಂದರು.

ನಂತರ ಮುಂಬೈಯಲ್ಲಿ ಕರ್ನಾಟಕ ಸಂಗೀತವನ್ನು ಕಲಿಸುವುದರಲ್ಲಿ ನಿರತರಾದ ಹಿರಿಯ ಸಂಗೀತ ಗುರುಗಳನ್ನು ಸನ್ಮಾನಿಸಲಾಯಿತು. ಇಂದು ಮುಂಬೈಯಲ್ಲಿ ಕರ್ನಾಟಕ ಸಂಗೀತ ಉಳಿದು ಬೆಳೆಸಿದ್ದರೆ ಅದಕ್ಕೆ ಶ್ರಮಿಸಿದವರು ಈ ರೀತಿಯ ಸಂಗೀತ ಗುರುಗಳು ಮತ್ತು ಸಂಗೀತದ ಶಾಲೆಗಳು. ಯುವ ಕಲಾವಿದರ ಈ ಸಂಗೀತ ಸಮ್ಮೇಳನದಲ್ಲಿ ಈ ರೀತಿ ಸಂಗೀತವನ್ನು ಬೆಳೆಸಲು, ಅನೇಕ ದಶಕಗಳು. ಶ್ರಮಪಟ್ಟ ಗುರುಗಳನ್ನು ಸನ್ಮಾನಿಸುವುದೇ ಯುವ ಪೀಳಿಗೆ ಅವರಿಗೆ ಸಲ್ಲಿಸುವ ಕೃತಜ್ಞತೆ.

ಅಂದು ಸನ್ಮಾನಿಸಲ್ಪಟ್ಟ ಗುರುಗಳ ಬಗ್ಗೆ ಒಂದು ಕಿರು ಟಿಪ್ಪಣಿಯನ್ನು ಪ್ರತ್ಯೇಕವಾಗಿ ಕೊಟ್ಟಿದೆ.

# Brief Profile of the Music Teachers Felicitated

**Smt. Alamelu Mani**

Smt. Alamelu Mani is a renowned musician and disciple of Sri. H. A. S. Mani and vidushi T. Brinda. She is an "A" Grade artiste of All India Radio and Door Darshan Mumbai and has performed in India and Abroad. She is a specialist in Padams & Javalis. She is teaching music to the students for the past 40 years.

**T. S. Anantharaman**

Sri. T. S. Anantharaman hails from a family of musicians. Gayaka Shikhamani Palghat Ananthram Bhagvatar was his grand father. He is an 'A' grade artiste of All India Radio and Door Darshan. He has performed in all reputed sabhas. He is the Principal of Nada Brahmam Music School, Chembur.

**Smt. T. R. Balamani**

One of the Senior Music Teachers of Mumbai. Apart from being a good concert artist, she has trained a numbers of students, who have become today's performing artists.

**Sri. G. Balasubramanyam**

Sri. G. Balasubramanyam is a disciple of Vidwan Subramanya Iyer and Tiruchi Swaminatha Iyer. He has been giving concerts for the past 50 years in India and abroad. An Artiste of All India Radio and Door Darshan, he is specialised in Thiruppugah. He is the founder of Nadalola Music Sabha, Chembur.

**Sri. N. S. Chandrashekhar Bhagvatar**

Sri N. S. Chandrashekhar Bhagavathar hails from a music family. He is a disciple of Vidwan Muniswamy Pandit & Smt. Dhanakoti Kuppammal. He is an artiste of AIR & Door Darshan and given concerts in India. He is President of Nadanjali Sabha Chembur and Teaches music at Chembur Fine Arts Music School.

**Smt. Kalyani Sharma**

Smt. Kalyani Sharma is a disciple of Sri. K. S. Narayanaswamy. She is an "A" Grade Artiste in Vocal & Veena. She was the joint Director of Shanmukhananda Sabha's Music School. She has given performances in India and abroad. She has written a book containing 108 Kirtis. She is teaching music to the students for the past 30 years.

**Smt. Mangalam Muthuswamy**

Smt. Mangalam Muthuswamy is a disciple of Thanam Expert Smt. Veena Vishalakshi, She is an "A" graded artiste of AIR & Door Darshan. She has performed in India & Abroad. Smt. Mangalam Muthuswamy is teaching Veena to the students at Shanmukhananda Sabha's Sangeeta Vidyalaya.

**Sri. K. V. Maniyappan**

Sri. K. V. Maniyappan hails from a music family. He is a disciple of Padmashree Palghat R. Raghu. He has given accompaniment to many eminent musicians over the past 40 years. He has given performances in India & Abroad. He is teaching mrudangam to the students of Chembur & Mulund Fine Arts School.

**Smt. B. Prabha Rao**

Smt. B. Prabha Rao is a disciple of Vidwan H. A. S. Mani. She later continuned learning from Vidwan Shri. Semangudi Sriniwas Iyer and Smt. T. Brinda. She is an "A" grade has artiste of AIR & Door Darshan. She performed in India and Abroad. She was a music teacher at Dombivali Fine Arts for two decades. She is continuing teaching music to the students of Dombivali.

**Sri. P. N. Padmanabhan**

Sri. P. N. Padmanabhan hails from a music family and is a disciple of Vidwan Pudukode Krishnamurthy. He is a graded artiste of AIR and has given performance in India. He served as a music teacher of Shanmukhananda sangeetha vidyalaya nearly 2 decades. He is presently teaching music to the students of Goregaon.

**Smt. Sabita Sadashiv**

Smt. Sabita Sadashiv is a disciple of Sri. Viswapathi Shastri and Sri. S. Ramachandran. She has given vocal concerts and violin accompaniment to the leading musicians in India and abroad. She has choreographed meaningful songs for various recitals both for dance and vocal concerts. She is training children in Carnatic vocal and violin for the past 25 years.

**Sri. C. K. Shankarnarayana Rao**

Sri. C.K. Shankarnarayana Rao is disciple of Veena Vidwan Sri. Chandrashekaraaiah. He was the founder of Tarangini Academy. He has given Veena concerts and lecture demonstrations in India. He has written a book on Veena which has been published by the Govt. of Karnataka. He has trained many students and is continuing teaching Veena to the students in Mumbai.

**Sri. K. Shivakumar**

Sri. K. Shivakumar is a disciple of his mother and Ustad Zia Mohiuddin Dagar.

He learned both carnatic and Hindustani Music. He is an "A" Grade Artist in AIR in both Carnatic and Hinduatani Music. He has accompanied eminent musicians in India & Abroad. He has performed in National Programme of Music & Akashvani Sangeetha Sammelan programme. He is teaching violin for the past 30 years.

**Smt. Sulochana Rajendran**

One of the leading musicologist, Journalist, teacher who served as the Director of Shanmukhanand music school over a decade.

**Smt. J. Susheela Mani**

Smt. J. Susheela Mani is a disciple of T. S. Kalyanaraman and Smt. T. R. Balamani. She has also learned Hindustani music. She has given concerts in India. She is teaching music at Bharatiya Music & Arts Society for the past 30 years.

**Smt. Uma Nagabhushan**

Smt. Uma Nagabhushan hails from a music family of Tumkur. She is a disciple of Vidwan Vekatram Bhagavathar She has given concerts in all over India. She is the founder Principal of Mysore Sangeetha Vidyalaya, Dombivli. She is training students for the Karnataka Music Examination Board.

**Sri. Vaidyanatha Bhagavatar**

Sri. Vaidyanatha Bhagavathar is a disciple of his father Sri Pranathirthahara Iyer and mother Smt. Narayani Ammal. He had the good fortune to learn from Ganaklashikhamani Muthaiah Bhagvathar for about 3 years. He has given music concerts in India and Abroad. He was the music director for Darpan Dance Troop. He is teaching music to students at Chembur.

**Smt. Vijaya Vishwanath**

Smt. Vijaya Vishwanath hails from a music family and has done sangeetha visharada course at Central Collage of Music, Chennai. She has learnt both Veena & Vocal. She the has given concerts in India and Abroad. She has served as a music teacher at Bharatiya Music and Fine Arts, Mumbai for the past 30 years and continuous to teach music.

**Smt. Vijayalaxmi Nathan**

Smt. Vijayalaxmi Nathan hails from a music family. She learned from her parents initially and later continued with Sangeetha Bhushanam T.S. Krishna Swamy. She is an "A" grade artists of A.I.R. and Door Darshan. She has specialised in singing Pallavis. She is teaching music for the past 35 years.



*ಸಚಿವೆ ರಾಣಿ ಸತೀಶ್‌ರವರಿಂದ ಸಮ್ಮೇಳನಾಧ್ಯಕ್ಷ ಬೆಂಗಳೂರು ವಿ. ಪ್ರವೀಣ್‌ರವರಿಗೆ ಗಾನ ಕಲಾ ಶ್ರೀ ಪ್ರಶಸ್ತಿ ಪ್ರದಾನ*

ಮುಂಬೈನ ಸಂಗೀತ ಶಿಕ್ಷಕರಿಗೆ ಶಾಲು ಹೊದಿಸಿ ಸನ್ಮಾನ ಪತ್ರ ನೀಡಿ, ಫಲ ಪುಷ್ಪಗಳನ್ನು ನೀಡಿ ಗೌರವಿಸಿದರು. ಎರಡೂ ಸಂಸ್ಥೆಯ ಪರವಾಗಿ ನಂತರ ಭೋಜನ ವಿರಾಮ, ವಿರಾಮದ ನಂತರ ಕಾರ್ಯಕ್ರಮ ಮುಂದುವರೆಯಿತು.

ಮೊದಲಿಗೆ ವೈಣಿಕ ವಿದ್ವಾನ್ ಶ್ರೀ ಮೈಸೂರು ಸುಬ್ರಹ್ಮಣ್ಯ ಅವರ ನೇತೃತ್ವದಲ್ಲಿ ಪ್ರಾತ್ಯಕ್ಷಿಕೆ, ಶ್ರೀ ಸುಬ್ರಹ್ಮಣ್ಯ ಅವರು ವೀಣೆ ಶೇಷಣ್ಣನವರ ಕೃತಿಗಳ ಕುರಿತು ಮಾತನಾಡಿದರು. ಇವರು ವರ್ಣ ಮತ್ತು ಸ್ವರ ಜತಿಗಳ ರಚನೆಗಳಲ್ಲಿ ಎತ್ತಿದ ಕೈ. ಇವರು ಖರಹರ ಪ್ರಿಯ, ಬೇಹಾಗ್, ಮೊದಲಾದ ರಾಗಗಳಲ್ಲಿ ಅಪರೂಪದ ರಾಗಗಳಾದ ಮಾನವತಿ, ವನಸ್ಪತಿ ಮೊದಲಾದ ರಾಗಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಇವರ ಕೃತಿಗಳನ್ನು ವೀಣೆಯಲ್ಲಿ ನುಡಿಸಲು ಕಷ್ಟ, ತಾಳವೂ ಅಷ್ಟೇ, ಅಣುಮಂದ್ರದಿಂದ ಷಡ್ಜ ತಲುಪಲು 5 ಬೆರಳುಗಗಳನ್ನೂ ಎಳೆದು ನುಡಿಸಬೇಕು. ಇದಕ್ಕೆ ಬಹಳ ಸಾಧನೆ ಬೇಕು, ಸ್ವರ ಜತಿಗಳನ್ನು ಪಲ್ಲವಿಯ ಭಾಗದಲ್ಲಿ ಹೇಳಬಹುದು. ಅಂತಹಗಾಂಭೀರ್ಯ ರಚನೆ. ಶೇಷಣ್ಣನವರು 5 ದೇವರ ನಾಮಗಳನ್ನು ಮಾಡಿದ್ದಾರೆ. ಇವರ ಜಂಜೂಟಿರಾಗದ ತಿಲ್ಲಾನ ಬಹಳ ಪ್ರಸಿದ್ಧವಾಗಿದೆ. ದೊರೆಸ್ವಾಮಿ ಐಯ್ಯಂಗಾರ್ ಅವರು ಹೇಳಿದಂತೆ ಇದು ಅವರ ''Best Moments of life'' ನಲ್ಲಿ ರಚನೆಯಾದದ್ದು. ಇವರಿಗೆ ನೆರವಾಗಿ ಶ್ರೀಮತಿ ಜಯಶ್ರೀ ಮಹೇಶ್ ಮತ್ತು Dr ರಮಾ ಬೆನ್ನೂರು ಅವರು ಕ್ರಮವಾಗಿ ಕಾಂಭೋದಿ ಮತ್ತು ಶಂಕರಾಭರಣ ರಾಗದ ಸ್ವರಜತಿಗಳನ್ನು ನುಡಿಸಿ ಆ ಕೃತಿಗಳ ಸ್ವರ ಸಂಯೋಜನೆಯ ವೈಶಿಷ್ಟ್ಯವನ್ನು ತಾಳದ ವೈಶಿಷ್ಟ್ಯವನ್ನು ಶ್ರೋತೃಗಳಿಗೆ ಅರಿವು ಮಾಡಿಕೊಟ್ಟರು. ನಂತರ ಪ್ರಶ್ನೋತ್ತರ ಕಾರ್ಯಕ್ರಮವೂ ನಡೆಯಿತು.

ನಂತರ 'ಗಾನ ಕಲಾ ಶ್ರೀ' ಶ್ರೀಮತಿ ಡಾ॥ ಸುಕನ್ಯಾ ಪ್ರಭಾಕರ್ ಅವರಿಂದ ಮೈಸೂರಿನ ಮಹಾರಾಜ ದಿ॥ ಶ್ರೀ ಜಯಚಾಮರಾಜ ಒಡೆಯರ್ ಅವರ ಕೃತಿಗಳನ್ನು ಕುರಿತು 'ಪ್ರಾತ್ಯಕ್ಷಿಕೆ' ನಡೆಸಿಕೊಟ್ಟರು. ಶ್ರೀಮತಿ ಸುಕನ್ಯಾ ಪ್ರಭಾಕರ್ ಅವರು ಜಯಚಾಮರಾಜ



*ಪ್ರಶಸ್ತಿ ಪಡೆದ ಸಮ್ಮೇಳನಾಧ್ಯಕ್ಷ ಪ್ರವೀಣರವರನ್ನು ಅಸೋಸಿಯೇಷನ್ ಅಧ್ಯಕ್ಷರಾದ ಎಸ್. ದೊರೆಸ್ವಾಮಿಯವರು ಸನ್ಮಾನಿಸುತ್ತಿರುವುದು.*



ಕರ್ನಾಟಕದ ಕಲಾ ಪರಿಷತ್ತಿನ ಅಧ್ಯಕ್ಷರನ್ನು ಸಚಿವೆ ರಾಣಿ ಸತೀಶ್ ಸನ್ಮಾನಿಸುತ್ತಿರುವುದು.

ಒಡೆಯರ್ ಅವರ ಕೃತಿಗಳನ್ನು ಅಧ್ಯಯಿಸಿ ಪ್ರಬಂಧ ಬರೆದು ಡಾಕ್ಟರೇಟ್ ಪದವಿಯನ್ನು ಪಡೆದಿದ್ದಾರೆ. 'ಶ್ರೀ ಮಹಾ ಗಣಪತೇ' ಹೀಗೆ ಹಲವಾರು ಕೃತಿಗಳನ್ನು ಕೇಳಿ ಆನಂದಿಸದವರೇ ಇಲ್ಲ. ಒಡೆಯರ ಕೃತಿಗಳು ಎಲ್ಲವೂ ಬೆಳಕಿಗೆ ಬಂದಿಲ್ಲ. ಹಲವಾರು ಉತ್ತಮ ಕೃತಿಗಳು ಕತ್ತಲೆಯಲ್ಲೇ ಅಡಗಿದೆ ಎಂಬುದು ದುರ್ದೈವ. ರಾಗ ರೀತಿ, ಕೃತಿ ರೀತಿ ರಚನಾ ರೀತಿಗಳಿಂದ ಪರಿಚಯವಿಲ್ಲ ಹೀಗೆ ಅಜ್ಞಾತದಲ್ಲಿದ್ದಾರೆ. ನೀಲವೇಣಿ ರಾಗದ 'ಶ್ರೀರಂಗನಾಥ ಪಾಹಿ ಮಾಂ ಚಿಂತಯ ಸದಾ ವಾರಣ ಸದಾ ಬಾಲಕೃಷ್ಣಂ... ಒಡೆಯರ ಕೃತಿಯ ವೈವಿಧ್ಯತೆ ಎಷ್ಟಿದೆ ಎಂದು ಗೊತ್ತಾಗುತ್ತದೆ. ಕೇವಲ 94 ಕೃತಿಗಳನ್ನು ರಚಿಸಿದ್ದಾರೆ. ಸಾಂಸ್ಕೃತಿಕ ಸಂಪತ್ತಿಗೆ ರಾಜರ ಕೊಡುಗೆ ಅನುಪಮ, ಅತಿಶಯ, ಕಲಾಪೋಷಕರಲ್ಲದೆ ಸ್ವತಃ ಕಲಾವಿದರು, ಸಾಹಿತಿ, ವಾಗ್ಗೇಯಕಾರರು. 94 ಕೃತಿಗಳೂ ಒಂದೊಂದು ವೈವಿಧ್ಯಮಯ, ವೈವಿಧ್ಯ ಪೂರ್ಣ, ಶಬ್ದ ಸಂಪತ್ತು, ಶಬ್ದ ಸಂಯೋಜನ ಕಲಾತ್ಮಕತೆ ಜ್ಞಾನ ಭಕ್ತಿ ಪ್ರದರ್ಶನ ಕೃತಿಗಳ ವಿಶೇಷತೆ, ಒಡೆಯರ ರಚನೆಗಳಲ್ಲಿ ದೇವದೇವಿಯರ ವರ್ಣನೆ ಮೂಲವಸ್ತುವಾದರೂ ಜೊತೆಗೆ 'ಉಪನಿಷತ್ತು' ಶಂಕರ ಭಗವತ್ಪಾದದರ್ಶನ 'ಶ್ರೀ ವಿದ್ಯಾ' ಉಪಾಸನೆಗಳ ಗಹನವಾದ ಅಂಶದಿಂದ ಕೃತಿಗೆ ತೇಜಸ್ಸು ಮೂಡಿಸಿದ್ದಾರೆ ಎಂದು ಹೇಳಿದರು. ಉದಾ : ''ಅಜಂ ಏಕಾಂ ಇತಿ', 'ಸಾಹಂ ಜೀವೋಹಂ ಬ್ರಹ್ಮಾಸ್ಮಿ'... ಸತ್ಯಂ ಜ್ಞಾನಂ. ''ಕಂ ಬ್ರಹ್ಮ ಖಂ ಬ್ರಹ್ಮ''.. ಒಡೆಯರಿಗೆ ಪದಗಳೊಡನೆ ಸರಸವಾಡುವ ಕಲೆ ಇತ್ತು ಎಂದು ''ಕಲಾವತಿ ಖರಾಳಿ ಕಾಳಿಕಾ ರೂಪಿಣಿ ಕಾತ್ಯಾಯಿನಿ... ಕಾಮಾಕ್ಷಿ''... ಸಂಗತಿಯನ್ನು ಹಾಡಿದರು. ಛಂದಸ್ಸಿನ ಬಳಕೆಯ ಬಗ್ಗೆ, ''ಕ್ಷೀರ ಸಾಗರ... ಕೃತಿಯ ತುಣುಕನ್ನು ಹಾಡಿ ಸಂಗೀತದ ಅಲೆಗಳಲ್ಲಿ ಸಾಗರದ ಅಲೆಗಳನ್ನು ತಂದು ಶ್ರೋತೃಗಳನ್ನು ಸಂತಸದ ಅಲೆಗಳಲ್ಲಿ ತೇಲಾಡಿಸಿದರು. ಒಡೆಯರ ಕೃತಿಗಳಲ್ಲಿನ ಪದಜೋಡನೆಗಳು ಹಾಡುಗಾರನ ಉಸಿರಿನ ಸಾಧನೆಗೆ ಸವಾಲಿನಂತಿದೆ



ಸಚಿವೆ ರಾಣಿ ಸತೀಶ್‌ರವರು ಹಿರಿಯ ಸಂಗೀತ ಗುರು ಶ್ರೀ ಸಿ. ಕೆ. ಶಂಕರನಾರಾಯಣ ರಾಯರನ್ನು ಸನ್ಮಾನಿಸುತ್ತಿರುವುದು.



ಹಿರಿಯ ಸಂಗೀತ ಗುರು ಹಾಗೂ ಕಲಾವಿದೆ ಶ್ರೀಮತಿ ವಿಜಯಲಕ್ಷ್ಮಿ ನಾಥನ್ ಅವರನ್ನು ಪ್ರವೀಣ್ ಸನ್ಮಾನಿಸುತ್ತಿರುವುದು.


**TRIMURTI**

**JEWELLERS**

**GOLD AND DIAMOND ORNAMENTS**

460/4, Venkatesh Niwas,
Ground Floor,
Bhaudaji Road,
Opp Mysore Association,
Matunga (C.Rly.)
Mumbai-400 019.

Phone : **402 34 85**



ಪ್ರಾತ್ಯಕ್ಷಿಕೆ ಉಪನ್ಯಾಸ ಮೈಸೂರು ವಿ. ಸುಬ್ರಹ್ಮಣ್ಯ ಅವರಿಂದ ವೀಣೆ ಶೇಷಣ್ಣನವರ ಬಗ್ಗೆ

ಎಂದರು.

ನಂತರ ಶ್ರೀಮತಿ ಜಯಶ್ರೀ ಮಹೇಶ್‌ರವರಿಂದ ವೀಣಾವಾದನದ ಕಚೇರಿ ನಡೆಯಿತು. ಜಯಶ್ರೀ ಮಹೇಶ್ ಅವರು ಅರ್ಥಶಾಸ್ತ್ರ ಮತ್ತು ಸಂಗೀತದಲ್ಲಿ M.A. ಪದವಿ ಮಾಡಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದಿಂದ ಸ್ವರ್ಣ ಪದಕವನ್ನು ಗಳಿಸಿದ್ದಾರೆ.

ನಂತರ ಚೈನ್ನೈನಿಂದ ಆಗಮಿಸಿದ್ದ ಶ್ರೀ ವಿಜಯ ಶಿವ ಇವರಿಂದ ಸಂಗೀತ ಕಾರ್ಯಕ್ರಮ. ಶ್ರೀ ವಿಜಯ ಶಿವ ಅವರು ''ವನಜಾ..ಕ್ಷೀ...'' ಎಂಬ ವರ್ಣದಿಂದ ಆರಂಭಿಸಿದರೂ 'ಆನಂದ ಭೈರವಿ'ಯಲ್ಲಿ ತ್ಯಾಗರಾಜರ 'ಮರೀವೆ....' 'ಸಾರಂಗ'ದಲ್ಲಿ 'ಪರಿಮಳ ರಂಗನಾಥ... ''ಕೊಲುವ ಮಾಲೆ...'' 'ತೋಡಿ'ಯಲ್ಲಿ ಹಾಡಿ ತಮ್ಮ ಕಂಠ ಸಿರಿಯಿಂದ ಶ್ರೋತೃಗಳನ್ನು ರಂಜಿಸಿದರು. ಪ್ರಾತ್ಯಕ್ಷಿಕೆಯಲ್ಲಿ ಭಾಗವಹಿಸಿದ ಎಲ್ಲ ಕಲಾವಿದರಿಗೂ ಮತ್ತು ಮತ್ತು ಪಕ್ಕ ವಾದ್ಯದಲ್ಲಿ ನೆರವಾದ ಎಲ್ಲ ಕಲಾವಿದರಿಗೂ ಪುಷ್ಪ ಗುಚ್ಛಗಳನ್ನು ನೀಡಿ ಗೌರವಿಸಲಾಯಿತು.

ಎಡನೆಯ ದಿನ ಭಾನುವಾರ ತಾ. 5-10-2003ರಂದು ಬೆಳಿಗ್ಗೆ 10-30ಕ್ಕೆ ಮೊದಲ ಕಾರ್ಯಕ್ರಮ



ಪ್ರಾತ್ಯಕ್ಷಿಕೆ ಉಪನ್ಯಾಸ ಡಾ. ಶ್ರೀಮತಿ ಸುಕನ್ಯಾ ಪ್ರಭಾಕರ್ ಡಾ. ಜಯಚಾಮರಾಜ ಒಡೆಯರ್ ಬಗ್ಗೆ.

ಶ್ರೀಮತಿ ಅನುರಾಧಾ ಪಾಲ್ ಅವರ ತಬಲಾ ವಾದನವಿತ್ತು. ಈಕೆ ಉಸ್ತಾದ್ ಅಲ್ಲಾರಾಖಾ ಹಾಗೂ ಉಸ್ತಾನ್ ಝಾಕಿರ್ ಹುಸೇನ್ ಅವರ ಶಿಷ್ಯೆ. ದೇಶ, ವಿದೇಶಗಳಲ್ಲಿ ಪ್ರವಾಸ ಮಾಡಿ ಕಛೇರಿ ನಡೆಸಿಕೊಟ್ಟಿದ್ದಾರೆ. ಅಂದು ಸುಮಾರು ಒಂದು ಘಂಟೆ ತಮ್ಮ ಕೈ ಬೆರಳುಗಳ ಕುಣಿತದೊಡನೆ ನೆರೆದ ಸಭಿಕರನ್ನೆಲ್ಲಾ ಬಹಳ ರಂಜಿಸಿದರು.

ನಂತರ ಮೈಸೂರು ಸದಾಶಿವ ರಾಯರ ಕೃತಿಗಳ ಬಗ್ಗೆ 'ಪ್ರಾತ್ಯಕ್ಷಿಕೆ ' ಯೊಡನೆ ಸಮೀಕ್ಷೆಯನ್ನು ಬೆಂಗಳೂರಿನ ವಿದ್ವಾನ್ ಬಿ. ವೆಂಕಟರಾಮ್ ಅವರ ಶ್ರೀಮತಿ ಜಿ. ಆರ್. ಜಯಾ ಅವರ ಸಹಕಾರದಲ್ಲಿ ನಡೆಸಿಕೊಟ್ಟರು. ಮೈಸೂರು ಸದಾಶಿವರಾಯರು 19ನೇ ಶತಮಾನದಲ್ಲಿದ್ದವರು. ಚಿತ್ತೂರು ಕಲೆಕ್ಟರರ ಆಫೀಸಿನಲ್ಲಿ ಕ್ಲರ್ಕ್ ಆಗಿ ಸೇವೆ ಸಲ್ಲಿಸಿದ್ದರು. 'ತ್ಯಾಗ ಬ್ರಹ್ಮೋಪನಿಶತ್' ಎಂಬ ಗ್ರಂಥ'ವನ್ನು ಬರೆದಿರುತ್ತಾರೆ. ವೀಣೆ ಶೇಷಣ್ಣ, ವೀಣೆ ಸುಬ್ಬಣ್ಣ, ಕೃಷ್ಣಾಬಾಯಿ, ಪಾರ್ಥಸಾರಥಿ ಇವರೆಲ್ಲಾ ಸದಾಶಿವ ರಾಯರ ಶಿಷ್ಯರಾಗಿದ್ದರು. ಸದಾಶಿವ ರಾಯರು ತಮ್ಮ ರಚನೆಯಗಳಲ್ಲಿ 'ಸದಾಶಿವ' ಎಂಬ ಅಂಕಿತವನ್ನು ಬಳಸುತ್ತಿದ್ದರು. ಅವರ ಪ್ರಸಿದ್ಧವಾಗಿರುವ ರಚನೆಗಳಲ್ಲಿ ಭೈರವಿರಾಗದ ''ಕಾಮಕೋಟಿ ಪೀಠಸ್ಥಿತೆ'' ಬಹಳ ಜನಜನಿತವಾಗಿದೆ. ಅವರ ಹೆಚ್ಚಿನ ಕೃತಿಗಳು ಶ್ರೀ ರಾಮ ದೇವರ ಮೇಲಿನದಾಗಿವೆ. ಅಂದು ವೆಂಕಟರಾಮ್ ಅವರು ಅತಿ ವಿರಳವಾದ ರಾಗ ಬಲಹಂಸದ ವಿಸ್ತಾರವನ್ನು 'ಪ್ರಾತ್ಯಕ್ಷಿಕೆ'ಗೆ ಆಯ್ದುಕೊಂಡಿದು ಶ್ರೀಮತಿ ಜಯಾ ಅವರು ಸುಶ್ರಾವ್ಯವಾಗಿ ಹಾಡಿ ರಂಜಿಸಿದರು. ''ನಿನುವಿನಾ ನಾಗತಿವವರುರಾ... ನನ್ನೆ ನಮ್ಮಿಂಚುರಾ... '' ಸದಾಶಿವ ರಾಯರ ಮನೆ ಮಾತು ಮರಾಠಿ, ಬೆಳೆದದ್ದು ಆಂದ್ರ ಪ್ರದೇಶದ ಚಿತ್ತೂರಿನಲ್ಲಿ, ನೆಲೆಸಿದ್ದು ಮೈಸೂರಿನಲ್ಲಿ ಅವರಿಗೆ ಮರಾಠಿ, ತೆಲುಗು, ಸಂಸ್ಕೃತ ಭಾಷೆಗಳು ಚೆನ್ನಾಗಿ ಬರುತ್ತಿದ್ದವು. ತ್ಯಾಗರಾಜರ ನಂತರ ಬಂದ ವಾಗ್ಗೇಯಕಾರರಲ್ಲಿ



ಜಯಶ್ರೀ ಮಹೇಶ್‌ರವರ ವೀಣಾ ವಾದನ.



ಅನೂರಾಧ ಪಾಲ್ ತಬಲಾ ವಾದನ

ಸದಾಶಿವರಾಯರೇ ಬಹಳಷ್ಟು ಕೃತಿಗಳನ್ನು ಬರೆದಿದ್ದಾರೆ. ಇವರ ಇನ್ನೂ ಅನೇಕ ಕೃತಿಗಳ ಪ್ರಾತ್ಯಕ್ಷಿಕತೆಯನ್ನು ಹೆಚ್ಚುಗಾರಿಕೆಯನ್ನು ತಿಳಿಸಿಕೊಟ್ಟು ವೆಂಕಟರಾಮ್ ಅವರು ನೆರೆದ ವಿದ್ವಾನ್ ಮಣಿಗಳ ಮೆಚ್ಚುಗೆ ಗಳಿಸಿದರು. ನಂತರ ಶ್ರೀ ಆರ್. ಕೆ. ಪದ್ಮನಾಭ ಅವರ ನೇತೃತ್ವದಲ್ಲಿ ತ್ಯಾಗರಾಜರ ಪಂಚರತ್ನ ಕೃತಿಯನ್ನು ಸಂಗೀತದ ಗುರುಗಳೂ ಶಿಷ್ಯರೂ ಕೂಡಿಯೇ ಹಾಡಿ ಶ್ರೀ ತ್ಯಾಗ ರಾಜರ ಅಡಿಯಲ್ಲಿ ತಮ್ಮ ಸೇವೆಯನ್ನು ಸಲ್ಲಿಸಿದರು. ಶ್ರೀ ಜಯರಾಮ್ ಅವರು ಮಂಗಳಾರತಿ ಮಾಡಿದರು.

ಮಧ್ಯಾಹ್ನದ ಊಟದ ವಿರಾಮದ ನಂತರ ಶ್ರೀ ಆರ್.ಕೆ. ಪದ್ಮನಾಭ ಅವರಿಂದ ಮೈಸೂರು ವಾಸುದೇವಾಚಾರ್ ಅವರ ಕೃತಿಗಳ 'ಪ್ರಾತ್ಯಕ್ಷಿಕೆ ' ಹಾಗೂ ಸಮೀಕ್ಷೆಯಿತ್ತು. ಅವರು ವಾದಿರಾಜ ಗುರುಗಳ ಭಕ್ತರು ವಾದಿರಾಜರ ಸ್ಮರಣೆ ಮಾಡಿ ತಮ್ಮ ವಂದನೆಗಳನ್ನು ಸಲ್ಲಿಸಿ ತಮ್ಮ ಭಾಷಣವನ್ನು ಪ್ರಾರಂಭಿಸಿದರು. ವಾಸುದೇವಾಚಾರ್ಯರನ್ನು 'ತಾತ' ಎಂದು ಸಂಬೋಧಿಸುತ್ತ ಅವರ ಕೃತಿಗಳು ಬಹಳ ಅರ್ಥಪೂರ್ಣವಾಗಿಯೂ, ಪ್ರಯೋಜನಕಾರಿ



ಪ್ರಾತ್ಯಕ್ಷಿಕೆ ಉಪನ್ಯಾಸ ಬೆಂಗಳೂರು ವೆಂಕಟರಾಂ ಮತ್ತು ಜಯವೆಂಕಟರಾಂ ಮೈಸೂರು ಸದಾಶಿವ ರಾಯರ ಬಗ್ಗೆ

ಯಾಗಿಯೂ ಇವೆ ಎಂಬುದನ್ನು ಹೇಳಿ ಸಂಗೀತ ವಿದ್ಯಾರ್ಥಿಗಳಿಗೆ ಒಳ್ಳೆ ಶರೀರವೂ ಶಾರೀರವೂ ಇರಬೇಕೆಂದರು. 'ತಾತ' ರಚಿಸಿದ ಕೃತಿಗಳ ಎಲ್ಲವೂ ಕಛೇರಿಗೆ ಯೋಗ್ಯವಾಗಿದೆ ಎಂದರು. ''ಭಾವಯಾಚ್ಯುತಂ ವಾಸುದೇವಂ.. ದೈವತಂ'' ಎಂಬುದನ್ನು ಮಂದ್ರ ಸ್ಥಾಯಿಯಲ್ಲಿ ಹಾಡಿ 'ವರ' ಅಂತರ ಗಾಂಧಾರದಲ್ಲಿದೆ, ತುಂಬಾ ಸಂತೋಷವನ್ನು ಕೊಡುತ್ತದೆಂಬುದನ್ನು ತೋರಿಸಿಕೊಟ್ಟರು. ಕೆಲವು ವಿರಳವಾದ ರಾಗಗಳಾದ ನಳಿನಿಕಾಂತಿ, ಮುಖಾರಿಯಂತ ರಾಗಗಳಲ್ಲೂ 'ತಾತ' ನವರು ವರ್ಣಗಳನ್ನು ಬರೆದಿರುವುದನ್ನು ಹೇಳಿ ನಳಿನಕಾಂತಿಯಲ್ಲಿ ''ಎವರುನ್ನಾರು ನನ್ನು ಬ್ರೋವಾ'' ಎಂಬುದನ್ನು ಹಾಡಿ ಧ್ವನಿಯಲ್ಲಿ ಸ್ವಿತ್ವಂತರತೆಯನ್ನೂ ತಂದು ತೋರಿಸಿದರು. 'ತಾತ'ನವರು ಬಹಳ 'ಕ್ರಿಯೇಟಿವ್' ಎಂಬುದಕ್ಕೆ 'ಅಭೇರಿ' ಹಾಗೂ 'ದೇವಗಾಂಧಾರಿ' ರಾಗದ ಸಂಚಾರಗಳ ವ್ಯತ್ಯಾಸ ತಿಳಿಸಿ ಅವರು ತ್ಯಾಗರಾಜರ ಕೃತಿ 'ನಗುಮೋಮೋ'ಗೆ ಸರಿದೂಗುವಂತೆ ಅಭೇರಿಯಲ್ಲಿ ಬಗೆದ ''ಭಜರೇ ಮಾನಸ''ವನ್ನು ಹಾಡಿ ತೋರಿಸಿದರು. ''ರಘುವಂಶ ಸುಧಾಂಬುಧಿ''ಗೆ ಸಮಾನವಾಗಿ ಕದದ ಕುತೂಹಲದಲ್ಲಿ 'ನೀಕೇ' ಲ ದಯಾ.. ರಘುರಾಮಚಂದ್ರ'' ಕೃತಿ ರಚನೆ ಮಾಡಿದ್ದರು. ಹಾಡುವವರು ಗಂಟಲು ಬಿಟ್ಟು ಹಾಡಬೇಕೆಂದ ಪದ್ಮನಾಭರು ಹಾಡಿದ ಸ್ವರ ಹೇಗಿರಬೇಕೆಂದರು. ''ಸ ರೀ ಗ ಮಾ ಪಾ ಡೇ ನೀ ಸಾಧಿಸಬಹುದು. ಸಾಕ್ಷಾತ್ಕಾರ'' ಎಂದು ''ಮಾ'' ಸ್ವರವನ್ನು ಸರಿಯಾಗಿ ಹಾಡಿದರೆ ಸಂಗೀತದಲ್ಲಿ ಅತ್ಯುಚ್ಚ ಸ್ಥಾನವನ್ನು ತಲುಪಬಹುದೆಂದರು. ಶ್ರೀ ಪದ್ಮನಾಭರ ಜೊತೆ ಅವರ ಶಿಷ್ಯರಾದ ಕುಮಾರಿ ರೂಪ ಕುಮಾರಿ ಸಹನಾರಾಮಚಂದ್ರ, ಕುಮಾರಿ ತೇಜಸ್ವಿನಿ, ಕುಮಾರಿ ಶ್ರೀಲಕ್ಷ್ಮಿ ಮತ್ತು ಶ್ರೀ ಹೆಬ್ಬಾರ್ ಹಾಡಿದರು.





ಪಂಚರತ್ನ ಕೃತಿಗಳ ಗೋಷ್ಠಿ ಗಾಯನ

ಶ್ರೀ ಆರ್.ಕೆ. ಪದ್ಮನಾಭರ ರಸವತ್ತಾದ ವರ್ಣನೆ



ಪ್ರಾತ್ಯಕ್ಷಿಕೆ ಉಪನ್ಯಾಸ ಆರ್. ಕೆ. ಪದ್ಮನಾಭ ಮೈಸೂರು ವಾಸುದೇವಾಚಾರ್ಯರ ಬಗ್ಗೆ.

ಹಾಗೂ ಧೀರ ಗಂಭೀರ ಹಾಡುಗಾರಿಕೆಯ ನಂತರ ಶ್ರೀಮತಿ ಮೀರಾ ರಾಜಾರಾಮ್ ಅವರು ಮತ್ತಯ್ಯ ಭಾಗವತ್‌ರ್ ಅವರ ಕೃತಿಗಳ ಬಗ್ಗೆ ಮಾತನಾಡಿದರು. ಬೇಕಿತ್ತು. ಶ್ರೀಮತಿ ಮೀರಾ ರಾಜಾರಾಮ್ ಅವರು ಮುತ್ತಯ್ಯ ಭಾಗವತರ್ ಅವರ ಬಗ್ಗೆ ಸಂಶೋಧನೆ ಮಾಡಿ ಡಾಕ್ಟರೇಟ್ ಪಡೆದಿದ್ದಾರೆ. ಹೀಗಾಗಿ ಅವರ ಬಳಿ ಬಹಳಷ್ಟು ಸಾಮಾಗ್ರಿ ಇದ್ದು ಸಮಯಾಭಾವದಿಂದ ದೀಕ್ಷಿತರ ಜೀವನದ ಸಂಕ್ಷಿಪ್ತ ಕತೆಯನ್ನಷ್ಟೆ ತಿಳಿಸಲು ಸಮರ್ಥರಾದರು. ಮುಖ್ಯವಾಗಿ ಮುತ್ತಯ್ಯ ದೀಕ್ಷಿತರು ಗಾನ ಕಲಾ ಸೇವೆಯನ್ನು ಒಬ್ಬ ಜ್ಞಾನ ಭೋಧಕರಾಗಿ ನಡೆಸಿ ಬಹಳಷ್ಟು ವಿದ್ಯಾರ್ಥಿಗಳನ್ನು ಉತ್ತಮ ಗಾಯಕರನ್ನಾಗಿ ಮಾಡಿ ಸಮಾಜಕ್ಕೆ ನೀಡಿದ್ದಾರೆಂದರು. ಅವರಿಗೆ ಸಂಗೀತ ಕಲಾನಿಧಿ ಎಂಬ ಬಿರುದನ್ನು, ಗಾಯಕ ಶಿರೋಮಣಿ ಎಂಬ ಬಿರುದನ್ನು ನೀಡಿ ಗೌರವಿಸಿರುವುದಲ್ಲದೆ ತಂಜಾವೂರಿನ ವಿಶ್ವವಿದ್ಯಾಲಯದವರು ಡಿ.ಲಿಟ್. ಪದವಿಯನ್ನು ಕೊಟ್ಟು ಗೌರವಿಸಿರುವುದನ್ನು ತಿಳಿಸಿದರು. ಇವರು ಬರೆದ 'ತ್ಯಾಗರಾಜ ವಿಜಯ' ಎಂಬ ಮಹಾಕಾವ್ಯವು ಸಂಸ್ಕೃತದಲ್ಲಿದ್ದು ಇದರಲ್ಲಿ 487 ಶ್ಲೋಕಗಳು, 7 ಸರ್ಗವೂ ಇದ್ದು ಪ್ರತಿಯೊಂದು ಸರ್ಗವೂ ಒಂದೊಂದು ಸ್ವರಕ್ಕೆ ಅಂಕಿತವಾಗಿದೆ ಎಂದರು. ಇವರು ಬರೆದ ಇನ್ನೊಂದು ಕೃತಿ 'ಸಂಗೀತ ಕಲ್ಪದ್ರುಮ' ತಮಿಳು / ಮಲೆಯಾಳಂ ನಲ್ಲಿದೆ. ಇವರ ರಚನೆಗಳಲ್ಲಿ ವರ್ಣಗಳು, ರಾಗ ಮಾಲಿಕೆಗಳು, ದರು ವರ್ಣಗಳು, ತಿಲ್ಲಾನಗಳು, ನವವರ್ಣಗಳು ಮುಂತಾಗಿ ಎಲ್ಲ ಬಗೆಯ ರಚನೆಗಳೂ ಇದ್ದು 'ಪ್ಯಾಲಿಂಡ್ರೋಮ್' ನಂತಹ ಚಿತ್ರ ಸ್ವರಗಳಿರುವುದು ವಿಶೇಷವೆಂದರು. ಇವರಿಗೆ ಹಾಡುಗಾರಿಕೆಯಲ್ಲಿ ಕುಮಾರಿ ಸಹನಾ ರಾಮಚಂದ್ರ, ಕುಮಾರಿ ಶ್ರೀಲಕ್ಷ್ಮಿ ಹಾಗೂ ಶ್ರೀ ಕಾರ್ತಿಕ್ ಹೆಬ್ಬಾರ್ ಸಹಕಾರವಿತ್ತರು.

ಸಂಜೆ ಚಹಾ ಪಾನದ ನಂತರ ಬೆಂಗಳೂರಿನಿಂದ ಬಂದ ಕಾಸರವಳ್ಳಿ ಸಹೋದರಿಯರಾದ ರೂಪಾ ಮತ್ತು ದೀಪಾ ಅವರ ಗಾಯನವಿತ್ತು. ಇವರಿಗೆ ಶ್ರೀ ರಘುರಾಮ್ ಅವರು ಪಿಟೀಲಿನಲ್ಲಿ, ಶ್ರೀ ರೇಣುಕಾ ಪ್ರಸಾದ್ ಅವರು ಮೃದಂಗದಲ್ಲಿ ಮತ್ತು ಶ್ರೀ ಕಾಶೀನಾಥ್ ಅವರು ಖಂಜೀರಾದಲ್ಲಿ ಪಕ್ಕವಾದ್ಯ ನುಡಿಸಿದರು.



ಸಂಗೀತ ಕಚೇರಿ ಕಾಸರವಳ್ಳಿ ಸಹೋದರಿಯರು. ರೂಪಾ ಮತ್ತು ದೀಪಾ

ಅನಂತರ ಚೆನ್ನೈನಿಂದ ಆಗಮಿಸಿದ ಶ್ರೀ ಬಾಲಾಸಾಯಿಯವರ ಕೊಳಲು ವಾದನವಾಯ್ತು. ಕೊಳಲು ವಾದನವನ್ನು ಬಹಳ ಇಷ್ಟಪಟ್ಟ ಶ್ರೋತೃಗಳು 8.15ರ ವರೆಗೂ ಕುಳಿತುಕೇಳಿದರು. ಇವರಿಗೆ ಶ್ರೀ ಎಚ್. ಕೆ. ವೆಂಕಟರಾಮ್ ಅವರು ಪಿಟೀಲಿನಲ್ಲಿ ಶ್ರೀ ಎಚ್.ಎಸ್. ಸುಧೀಂದ್ರ ಅವರು ಮೃದಂಗದಲ್ಲಿ ಮತ್ತು ಶ್ರೀ A.S.N. ಸ್ವಾಮಿಯವರು ಕಂಜೀರದಲ್ಲಿ ಪಕ್ಕವಾದ್ಯ ನುಡಿಸಿದರು.

ಕೊನೆಯಲ್ಲಿ ಶ್ರೀ ಎಂ. ಎ.ಎನ್. ಪ್ರಸಾದ್ ಅವರು ಎರಡೂ ಸಂಸ್ಥೆಗಳ ಪರವಾಗಿ ವಂದಾರ್ಪಣೆ ಮಾಡಿದರು.

- ರಮಾವಸಂತ್ ಮತ್ತು ಭವಾನಿ



ಸುಪ್ರಸಿದ್ಧ ಸಂಗೀತ ಕಲಾವಿದರ ಛಾಯಾ ಚಿತ್ರ ಪ್ರದರ್ಶನ

# Evolution of Carnatic Music from "Bombay" to "Mumbai"

***by Lalitha & Geetha***

India's greatest cultural heritage is her music, which is the finest of fine arts. Indian music is considered as Gandharva Veda and is older than any recorded history. Indian music had developed as a single system of music, closely connected with temple worship and mostly patronized by kings and men of wealth in the earlier centuries. But after repeated foreign invasions from the northwest, our traditional music was greatly influenced by the Arabian and Persian music. Since then two similar but distinct systems of music evolved: Hindustani music and Carnatic music. The system of Carnatic music has a rich tradition. The legacy handed down to us by our ancestors and the 'Trinity' has enriched this performing art.

The development of Carnatic music in Bombay is closely associated with the migration of South Indians from Tamilnadu, Kerala, Andhra and Karnataka to Bombay. These migrants, who came to Bombay in search of livelihood, carried with them the musical wealth and traditions of the South. The musicians among them, though a handful to start with, started imparting lessons in Carnatic music. In those days, there were hardly any music schools or sabhas. So the musicians had to go from house to house to teach music to students. The first set of music teachers in Bombay was Sri Krishna Bhagavatar, Sri Jalpesha Bhagavatar and Sri Yagneswara Bhagavatar. In those days, South Indian settlements were predominantly in Matunga and Dadar areas. Probably this prompted the establishement of Thyagaraja Sabha in Matunga, the first institution in Bombay to teach Carnatic music. Prominent among the musicians and music teachers associated with this sabha were Sri Kolathu Bhagavatar, Sangeeta Bhushanam Sri Vaidyanatha Bhagavatar, Sri Narayana Bhagavatar, Sri Bhaskara Bhagavatar and Sri Madurai Sundara Bhagavatar. Gradually Bombay saw the establishment of the following institutions. 1. Krishna Music Academy by Shri T. S. Krishnaswamy 2. Saraswati Music Academy by Shri Vaidyanatha Bhagavatar and 3. Shri H. S. Mani's (Chellamani Bhagavatar's) Music School at Matunga. Along side there were also reputed musicians and Vidwans like Harihara Bhagavatar, Pallavoor Mani Bhagavatar, Vidhushi Lalitha Venkatraman, Vidwan Sri. S. Ramachandran, Sri. Shankaranarayana Rao and Sri Narayanaswamy, who imparted music lessons in vocal, veena and violin.

As the strength of the South Indian community grew, the music lovers took the initiative in forming music Sabhas. On this line, Shanmukhananda Fine Arts and Sangeetha Sabha was formed in the year 1952 with the aim of propagating Carnatic music. Monthly concerts were arranged and performing artistes from the South were invited to perform for the Bombay audience. To introduce the younger generation to Carnatic music, Shanmukhanada Sabha started a music school-Shanmukhananda Sangeeta Vidyalaya-and imparted lessons in Carnatic music in vocal, violin, veena and mridangam. Over the years, it has grown into a leading institution and is now affiliated to the University of Mumbai. Bhartiya Music and Arts Society, Which was established after Shanmukhananda, also started a music school in its premises in Matunga to teach Carnatic music - both vocal and instrumental.

As the South Indian community slowly spread from Matunga to the suburbs like Chembur, Ghatkopar, Andheri, Goregaon, Mulund and Thane, more Sabhas were established in these suburbs to cater to the needs of the music loving South Indian community. Prominent among them are: Chembur Fine Arts, Bhakta Rasika Ranjani Sabha [Anushaktinagar], Rasika Ranjani Sabha [Ghatkopar], Mulund Fine Arts, Naadalaya [Andheri] and Gana Kala Sabha [Goregaon]. These Sabhas also have music schools exclusively for teaching and training in Carnatic music. The following are some of the well-known music schools in these suburbs of Mumbai: 1. Sri Naadabrahmam Music School, Naadanjali and Fine Arts Society's Music School in Chembur 2. BRR Music School in Anushakti Nagar. 3. RR Sabha Music School in Ghatkopar. 4. Mulund Fine Arts' Music School in Mulund. 5 Gana Kala Music School in Goregaon. 6. Naadalaya Music School in Andheri. In addition to the above, Mysore Sangeetha Vidyalaya of Dombivli and Dombivli Fine Arts also run music schools. It would be worth mentioning that Naadabrahmam Music School and Mysore Sangeetha Vidyalaya train their student for the music examinations conducted by Karnataka Education Board. Apart from these music schools, there are many eminent teachers, who teach and give training in Carnatic music, in Mumbai. Prominent among them are Sri Vaidyanatha Bhagavatar, Sri. Chandrashekara Bhagavatar, Sri T. S. Anantharama Bhagavatar, Smt. Vijayalakshmi Nathan, Smt. T. R. Balamani, Smt. Alamelu Mani, Smt. Kalyani Sharma, Smt. T. S. Kaveri,

## MAIL BOX

*President*

*Mysore Assocation*

*Mumbai - 400 019.*

*Dear Sir,*

*Congrats for your conducting the Music Conference on 4 & 5/1/03 in an ideal manner. The speeches by various office bearers and artists reflected a very high level of understanding and respect to tradition. I particularly appreciate the erudition and courage of conviction of Shri Padmanabha, who while endorsing the views of one of the delegates about the Raga Lakshana of 'Balahamsa' went to the extent of stating that even the decisions of the experts' committees of academies need not be bindging on musicians in that regard. The lecture-cum-demos were all very instructive and refreshing. Honouring the Gurus of Mumbai in order of their age & experience was unique and in keeping with our tradition.*

*Yours faithfully,*

***S.K. Rao***

*Mumbai*

*5-1-2003*

ಕೃತಿ ಪರಿಶೀಲನೆ : ಡಾ. ಸುಬ್ಬಣ್ಣ ರೈ

## ಗೋದಾವರಿ ವರಂ ಇರ್ದ ಕನ್ನಡ ನಾಡು

ಲೇ : ಡಾ. ಜಿ. ಎನ್. ಉಪಾಧ್ಯ
ಪ್ರ. : ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ಮುಂಬಯಿ ೨೦೦೨, ಪುಟ ರೂ. ಬೆಲೆ ೧೫೦.೦೦

ಶ್ರೀ ಜಿ. ಎನ್. ಉಪಾಧ್ಯ ಅವರಿಗೆ ಮುಂಬಯಿ ವಿಶ್ವವಿದ್ಯಾಲಯದಿಂದ ಪಿ.ಎಚ್.ಡಿ. ಪದವಿಯನ್ನು ದೊರಕಿಸಿಕೊಟ್ಟ 'ಮಹಾರಾಷ್ಟ್ರದ ಕನ್ನಡ ಶಾಸನಗಳು : ಒಂದು ಸಾಂಸ್ಕೃತಿಕ ಅಧ್ಯಯನ' ಎಂಬ ಮಹಾಪ್ರಬಂಧವು ಈಗ ಹೊಸ ರೂಪಕಾತ್ಮಕ ಶೀರ್ಷಿಕೆಯೊಂದಿಗೆ ಪುಸ್ತಕರೂಪದಲ್ಲಿ ಹೊರಬಂದಿದೆ. ಕವಿರಾಜ ಮಾರ್ಗ ಕ್ರಿ.ಶ. ೯ನೆಯ ಶತಮಾನದವರೆಗೆ ವ್ಯಾಪಿಸಿತ್ತೆಂದು ಹೇಳಿದೆ. ಪ್ರಸ್ತುತ ಉಪಾಧ್ಯ ಅವರು ಕ್ರಿ.ಶ. ೧೧ನೆಯ ಶತಮಾನದ ಪೂರ್ವಾರ್ಧದಿಂದ ೧೩ನೆಯ ಶತಮಾನದ ಉತ್ತರಾರ್ಧದ ವರೆಗಿನ ದಕ್ಷಿಣ ಮಹಾರಾಷ್ಟ್ರದ ಕನ್ನಡ ಶಾಸನಗಳನ್ನು ಅಧ್ಯಯನ ನಡೆಸಿ, ಆ ಕಾಲಕ್ಕೆ ಉತ್ತರದ ಗೋದಾವರಿ ತನ್ನ ಕನ್ನಡ ನಾಡು ವ್ಯಾಪಿಸಿತೆಂಬುದನ್ನು ಪ್ರತಿಪಾದಿಸುತ್ತಾರೆ.

ಇತಿಹಾಸಕಾಲದಲ್ಲೂ ನಮ್ಮ ನಾಡಿಗೆ ರಾಜಕೀಯ ಎಲ್ಲೆಗಳಿದ್ದವು. ಆದರೆ ಅಂದಿನ ಎಲ್ಲೆಗಳ ಮಾನದಂಡಕ್ಕೂ, ಇಂದಿನದಕ್ಕೂ ಸಾಕಷ್ಟು ವ್ಯತ್ಯಾಸಗಳಿವೆ. ಹಿಂದೆ ರಾಜನೊಬ್ಬನು ತನ್ನ ಸಾಮರ್ಥ್ಯಕ್ಕನುಸಾರ ಸಾಮ್ರಾಜ್ಯವನ್ನು ವಿಸ್ತರಿಸಿಕೊಳ್ಳಬಹುದಿತ್ತು. ಆದರೆ ಇಂದು ನಮ್ಮಲ್ಲಿ ಭಾಷಾವಾರು ಪರಿಕಲ್ಪನೆಯಲ್ಲಿ ರಾಜ್ಯಗಳು ಮರುವಿಂಗಡೆಗೊಂಡಿವೆ. ಇತಿಹಾಸ ಕಾಲದಲ್ಲಿ ಆಡಳಿತ ವಿಸ್ತರಣೆಯ ಜೊತೆಗೆ ಆಡಳಿತ ಭಾಷೆಯೂ ವಿಸ್ತರಣೆಗೊಳ್ಳುತ್ತಿತ್ತು. ಆದರೆ ವರ್ತಮಾನದಲ್ಲಿ ಆ ರೀತಿಯ ವಿಸ್ತರಣೆಗೆ ಅವಕಾಶವಿಲ್ಲ. ಹಾಗಾಗಿಯೇ ಇಂದು ನಮ್ಮಲ್ಲಿ ಸಾಂಸ್ಕೃತಿಕ 'ಗಡಿವಲಯ'ಗಳು ವಿವಾದಗಳ ಕೇಂದ್ರಗಳಾಗಿವೆ. ನಮ್ಮ ಕನ್ನಡದ ಅರಸರು ಉತ್ತರದ ಹಿಮಾಲಯದ ತನಕವೂ ದಂಡೆತ್ತಿ ಹೋಗಿದ್ದಾರೆಂಬ ಉಲ್ಲೇಖಗಳು ಚರಿತ್ರೆಯಲ್ಲಿ ಸಿಗತ್ತವೆ. ಚಾಲುಕ್ಯರ ಇಮ್ಮಡಿ ಪುಲಕೇಶಿ ನರ್ಮದೆಯ ಕೆಳಭಾಗದ 'ದಕ್ಷಿಣಾಪಥ'ಕ್ಕೆ ಅಧಿಪತಿಯಾಗಿದ್ದನೆಂದು ಚರಿತ್ರೆ ಹೇಳುತ್ತದೆ. ಗೋದಾವರಿವರೆಗಂತೂ ಕನ್ನಡನಾಡು ವ್ಯಾಪಿಸಿದುದಕ್ಕೆ ಪುರಾವೆಯಾಗಿ ಅಸಂಖ್ಯ ಅಧ್ಯಯನವು ಈ ಅಂಶವನ್ನು ಇನ್ನಷ್ಟು ಸ್ಪಷ್ಟಪಡಿಸುತ್ತದೆ. ಇದಕ್ಕಾಗಿ ಅವರು ಪ್ರಕಟವಾದ ಸುಮಾರು ನೂರಾಎಪ್ಪತ್ತು ಹಾಗೂ ಅಲ್ಲಲ್ಲಿ ಸಾರ ರೂಪದಲ್ಲಿ ದೊರಕುವ ಸುಮಾರು ಎಪ್ಪತ್ತು ಒಟ್ಟಾಗಿ ಸುಮಾರು ಇನ್ನೂರ ನಲವತ್ತು ಶಾಸನಗಳನ್ನು ಮೂಲ ಆಕರಗಳನ್ನಾಗಿ ಬಳಸಿಕೊಂಡಿದ್ದಾರೆ. ಬಹುಪಾಲು ಶಾಸನಗಳನ್ನು ಅಧ್ಯಯನಕಾರರು ಪ್ರಕಟಿತ ರೂಪದಲ್ಲೇ ಗಮನಿಸಿರುವರಾದರೂ, ನಂತರದಲ್ಲಿ ಅವು ಲಭ್ಯವಾದ ಮೂಲ ಸ್ಥಳಗಳಿಗೆ ಭೇಟಿಯಿತ್ತು, ಅಲ್ಲಿನ ಜನರನ್ನು ಸಂದರ್ಶಿಸಿ, ವಿವರಗಳನ್ನು ಖಚಿತಪಡಿಸಿಕೊಂಡಿದ್ದಾರೆ. ಹಾಗಾಗಿ ಅಧ್ಯಯನದಲ್ಲಿ ವ್ಯಾಪಕವಾದ ಕ್ಷೇತ್ರಾರ್ಯನುಭವವೂ ಹಾಸು ಹೊಕ್ಕಾಗಿದೆ ಯೆನ್ನಬಹುದು.

ಗೋದಾವರಿವರೆಗೆ ಕನ್ನಡನಾಡು ವ್ಯಾಪಿಸಿತ್ತೆಂಬುದನ್ನು ಪ್ರತಿಪಾದಿಸುವುದರ ಜತೆಗೆ ದಕ್ಷಿಣ ಮಹಾರಾಷ್ಟ್ರ (ಈಗಿನ ಪರಿಕಲ್ಪನೆಯಂತೆ) ಮತ್ತು ಕರ್ನಾಟಕದ ರಾಜಕೀಯ ಇತಿಹಾಸಗಳ ಮೇಲೂ ಹೊಸ ಬೆಳಕು ಚೆಲ್ಲಲು ಇಲ್ಲಿ ಪ್ರಯತ್ನಿಸಲಾಗಿದೆ. ಶಾಸನಗಳಲ್ಲಿ ಕಂಡುಬರುವ ವ್ಯಕ್ತಿನಾಮ, ಸ್ಥಳನಾಮಗಳನ್ನು ವಿಶ್ಲೇಷಣೆಗೊಳಪಡಿಸಲಾಗಿದೆ. ಶಾಸನಗಳ ಸಾಹಿತ್ಯಿಕ ಮಹತ್ವವನ್ನು ವಿವರಿಸಲಾಗಿ. ಲೇಖಕರೆ ಹೇಳುವಂತೆ ''ಮಧ್ಯಕಾಲೀನ ದಕ್ಕನ್ ಪ್ರಸ್ಥಭೂಮಿಯ ಇತಿಹಾಸದ ಪುನಾರಾಚನೆಯಲ್ಲಿ ಈ ಶಾಸನಗಳಿಗೆ ವಿಶೇಷ ನೆಲೆ ಬೆಲೆಯಿದೆಯೆಂಬುದನ್ನು ಈ ಅಧ್ಯಯನದಲ್ಲಿ ತೋರಿಸಿಕೊಡಲಾಗಿದೆ.'' ಅವರೇ ಅಭಿಪ್ರಾಯ ಪಡುವಂತೆ ಮಹಾರಾಷ್ಟ್ರ ಎಂಬ ಪರಿಕಲ್ಪನೆ ಈಚಿನದು. ಹದಿಮೂರನೆಯ ಶತಮಾನದ ಅಂತ್ಯದವರೆಗೂ ಇಂದಿನ ಮಹಾರಾಷ್ಟ್ರದ ಕನ್ನಡ ರಾಜವಂಶಗಳ ಹತೋಟಿಯಲ್ಲಿತ್ತು. ಆದ್ದರಿಂದ ಇಂದು ಪ್ರಾಚೀನ ಮಹಾರಾಷ್ಟ್ರದ ಇತಿಹಾಸ ಎಂದು ಯಾವುದನ್ನು ಕರೆಯಲಾಗುತ್ತದೆಯೋ ಅದು ಪ್ರಾಚೀನ ಕರ್ನಾಟಕದ ಇತಿಹಾಸವೇ ಆಗಿದೆ ಎಂಬುದು ಇಲ್ಲಿನ ಕನ್ನಡ ಶಾಸನಗಳ ಅಧ್ಯಯನದಿಂದ ಮತ್ತಷ್ಟು ಮನದಟ್ಟಾಗುತ್ತದೆ.

ಇಂತಹ ಅಧ್ಯಯನ ಪ್ರತಿಪಾದನೆಗಳ ಮೂಲಕ ವರ್ತಮಾನದಲ್ಲೂ ಕನ್ನಡ ನಾಡನ್ನು ಗೋದಾವರಿ ತನಕ ವಿಸ್ತರಿಸಬೇಕೆಂಬ ಹಕ್ಕನ್ನು ಲೇಖಕರು ಮಂಡಿಸುತ್ತಾರೆಂದು ತಿಳಿದರೆ ತಪ್ಪಾದೀತು. ಇಂದು ನಮ್ಮಲ್ಲಿ ನಡೆಯುತ್ತಿರುವ ಗಡಿ ವಿವಾದಗಳ ರೂವಾರಿಗಳೆನಿಸಿಕೊಂಡವರು ಇಲ್ಲಿನ ಚಾರಿತ್ರಿಕ ಸತ್ಯಗಳನ್ನು ತಿಳಿದುಕೊಂಡು, ತಮ್ಮಲ್ಲಿ ಮನೆಮಾಡಿರುವ ಭಾಷಿಕ ಸತ್ಯಗಳನ್ನು ತಳಿದುಕೊಂಡು, ತಮ್ಮಲ್ಲಿ ಮನೆಮಾಡಿರುವ ಭಾಷಿಕ ಇಲ್ಲವೆ ಸಾಂಸ್ಕೃತಿಕ ಸಂಕುಚಿತತೆಯನ್ನು ಕಿತ್ತೊಗೆಯಲು ಕೃತಿ ಪ್ರೇರಕವಾದಲ್ಲಿ ಇಂತಹ ಅಧ್ಯಯನಗಳು ಸಾರ್ಥಕವೆನಿಸಬಲ್ಲವು. ಈ ಬಗೆಯ ಅಧ್ಯಯನಗಳು ಮರಾಠಿಯಲ್ಲೂ ನಡೆದಾಗ, ಅಥವಾ ಮರಾಠಿಗೆ ಅನುವಾದಗೊಂಡಾಗ ಇದರ ಪ್ರಸ್ತುತತೆ ಇನ್ನಷ್ಟು ಹೆಚ್ಚುತ್ತದೆ. ಆ ನಿಟ್ಟಿನಲ್ಲಿ ಜಿ. ಎನ್. ಉಪಾಧ್ಯ ಅವರ ಈ ಕೃತಿಗೆ ತನ್ನದೇ ಆದ ಮಹತ್ವವಿದೆ.

- ಡಾ. ಎ. ಸುಬ್ಬಣ್ಣ ರೈ.

## Evolution of Carnatic Music

*(...contd.)*

Smt. Uma Nagabhushanam, Sri Nandakumar and Sri. Sivakumar, Smt. Mangalam Muthuswamy, Mr. K. V. Maniappan and Mr. S. V. Ramachandran. There are many more teachers, who are rendering yeoman service to Carnatic music in Mumbai. Much as we would like to mention all their names here, we are not in a position to do so due to space constraints. The presence of all these institutions and dedicated teachers in Mumbai ensures that there is no dearth of facilities for any student aspiring to get advanced training in Carnatic music in Mumbai.

The music Sabhas and schools in Mumbai play a significant role in preserving and propagating our tradition in music and fine arts. These Sabhas celebrate Thyagaraja Aradhana, which is an integral part of the Carnatic music tradition, every year in different parts of Mumbai. The devotional fervour with which it is celebrated here certainly recreates the Thiruvaiyaru atmosphere in Mumbai. Many Sabhas also arrange special composers day programmes, in order to keep alive the compositions of various composers who have enriched carnatic music. In addition to these, they also organise educative programmes like lecture-demos, quizzes and music conferences. To encourage young talents, music competitions are held by various music schools and Sabhas. Talent promotion concerts are arranged to provide platforms to upcoming students of music. Little wonder then, that Bombay has produced many music critics, musicologists, high profile musicians, performing artistes and most importantly a sizeable number of knowledgeable and appreciative rasikas.

In conclusion, it may be said that the evolution of Carnatic music in Mumbai has been quite arduous. In this evolution, the music schools and music Sabhas of Mumbai have played a vital role and they have steadfastly preserved the rich tradition, culture and heritage of the nation.



## Jc Sreedhar S. Sharma

Jc Sreedhar S. Sharma has been elected unanimously as President of Bombay Galaxy Junior Chamber for the year 2003 in the Annual General Meeting held in the city recently. Jc. Sharma is a well known Media Consultant and is actively connected with a number of Social and Cultural Organizations in Mumbai City.

Bombay Galaxy Junior Chamber is a voluntary leadership development organization of young men and women who have come together under the banner of Indian Junior Chamber (IJC). IJC has a strength of over 38,000 members, more popularly known as Jaycees, belonging to over 1100 local chapters from over 400 towns and cities across the length and breath of the country. Jc is affiliated since 1949 to Junior Chamber International (JCI) which is serving and developing people in 115 countries worldwide for the past 85 years.

'Nesaru' congratulates Shri Sreedhar S. Sharma.

## ಜನವರಿ 17ರಂದು ಆಹಾರ ಸ್ಪರ್ಧೆ ಹಾಗೂ ಅರಸಿನ ಕುಂಕುಮ ಕಾರ್ಯಕ್ರಮಗಳು

ಕರ್ನಾಟಕ ಸಂಘ ಮುಂಬಯಿಯ ಮಹಿಳಾ ವಿಭಾಗದ ವತಿಯಿಂದ ದಿನಾಂಕ 17-01-2003ರಂದು ಮಹಿಳೆಯರಿಗಾಗಿ ಅಪರಾಹ್ನ 3.30 ಗಂಟೆಗೆ ಆಹಾರ ಸ್ಪರ್ಧೆಯನ್ನು ಆಯೋಜಿಸಲಾಗಿದ್ದು- ಅಂದು ರಾಗಿ ಹಿಟ್ಟಿನಿಂದ ತಯಾರಿಸಿದ ಸಿಹಿ ಅಥವಾ ಖಾರ ತಿಂಡಿಗಳನ್ನು ಮಾಡಿ ಸಂಘದಲ್ಲಿ ಪ್ರದರ್ಶಿಸಬೇಕಲ್ಲದೆ ಮಾಡುವ ವಿಧಾನವನ್ನು ಬರೆದು ಒಂದು ಪತ್ರಿಕೆಯನ್ನು ಸಂಘಕ್ಕೆ ಕೊಡಬೇಕು. ಎರಡು ವಿಭಾಗದಲ್ಲಿಯೂ ಮೂರು ಬಹುಮಾನವಿದೆ.

ಆಸಕ್ತರು ತಮ್ಮ ಹೆಸರನ್ನು ಸಂಘದ ಕಛೇರಿಯಲ್ಲಿ ದೂರವಾಣಿ ಸಂಖ್ಯೆ 24377022/24379645 ಮೂಲಕ ಕೊಡಬಹುದು. ಹೆಸರು ನೋಂದಾಯಿಸಲು ಕೊನೆ ದಿನಾಂಕ 15-01-2003 ಅದೇ ದಿನ ಸಂಜೆ 5.30ಕ್ಕೆ ಸಂಕ್ರಾಂತಿ ಹಬ್ಬದ ಅರಶಿನ ಕುಂಕುಮ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಸಂಘವು ಪ್ರಕಟಣೆಯ ಮೂಲಕ ವಿನಂತಿಸಿಕೊಂಡಿದೆ.

## ಮಾನಸಿಕ ಆರೋಗ್ಯದ ಸೂತ್ರಗಳು

## Tips for

## Stress Management & Promotion of Mental Health

01. M - Minimise your needs, lead a simple and contentful life
Money management: Be wise in earning and spending money.
ನಿಮ್ಮ ಅಗತ್ಯಗಳನ್ನು ತಗ್ಗಿಸಿ, ಸರಳ ತೃಪ್ತ ಜೀವನ ಮಾಡಿ. ಹಣವನ್ನು ವಿವೇಚನೆಯಿಂದ ಸಂಪಾದಿಸಿ ಮತ್ತು ಬಳಸಿ. ಆದಾಯಕ್ಕಿಂತ ಖರ್ಚು ಹೆಚ್ಚು ಬೇಡ.

02. E - Expectations about others : To be reduced, persuade them to understand and live comfortably with you.
ಇತರರ ಬಗ್ಗೆ ನಿರೀಕ್ಷೆಗಳನ್ನು ಕಡಿಮೆ ಮಾಡಿ. ಅವರು ನಿಮ್ಮೊಂದಿಗೆ ಹೊಂದಿಕೊಳ್ಳಲು ಅವಕಾಶಕೊಡಿ. ಎಲ್ಲರೊಡನೆ ಸ್ನೇಹದಿಂದಿರಿ

03. N - Negative thinking : To be changed to positive thinking.
ನಿರಾಶವಾದ ಬೇಡ. ಒಳ್ಳೆಯದಾಗುತ್ತದೆ ಎಂಬ ಭರವಸೆ ಇರಲಿ. ಎಲ್ಲರಲ್ಲಿ ಮತ್ತು ಎಲ್ಲರಲ್ಲಿ ಒಳ್ಳೆಯದನ್ನು ಕಾಣಿ.

04. T - Today should get importance, not the past, not the future.
ವರ್ತಮಾನ ಮುಖ್ಯ. ನಿನ್ನೆ ಮತ್ತು ನಾಳೆ ಬಗ್ಗೆ ಚಿಂತೆ ಬೇಡ.
Try to be happy today ಈ ದಿನ ಚೆನ್ನಾಗಿರಿ.

05. A - Accept Reality, Adapt yourself to it
ವಾಸ್ತವಿಕತೆಯನ್ನು ಒಪ್ಪಿಕೊಳ್ಳಿ ಮತ್ತು ಅದಕ್ಕೆ ಹೊಂದಿಕೊಳ್ಳಿ.

06. L - Loneliness to be avoided. Get support of others. Develop religious and spiritual activities.
ಒಂಟಿಯಾಗಿರಬೇಡಿ ಜನರೊಂದಿಗೆ ಬೆರೆಯಿರಿ. ಧಾರ್ಮಿಕ, ಅಧ್ಯಾತ್ಮಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಿ.

07. H - Hobbies to divert your attention, to relax : Music, reading, creative activities, sports, yoga, meditation.
ಸೃಜನಶೀಲ ಚಟುವಟಿಕೆಗಳು, ಸಂಗೀತ ಸಾಹಿತ್ಯ, ಯೋಗ ಧ್ಯಾನ, ಕ್ರೀಡೆಗಳಿಗೆ ದಿನವೂ ಒಂದು ಗಂಟೆ ಮೀಸಲಿಡಿ.

08. E - Express your feelings with someone you like/write diary.
ನಿಮ್ಮ ಭಾವನೆ ಅನಿಸಿಕೆಗಳನ್ನು ಆತ್ಮೀಯರೊಂದಿಗೆ ಹೇಳಿಕೊಳ್ಳಿ.

09. A - Be Active. Enjoy the work you do. Keep yourself busy.
ಸದಾ ಚಟುವಟಿಕೆಯಿಂದಿರಿ. ನೀವು ಮಾಡುವ ಕೆಲಸಗಳಿಂದ ಸಂತೋಷಪಡಿ.

10. L - Learn Skills, improve your knowledge to manage your problems.
ನಿಮ್ಮ ಜ್ಞಾನ ಕೌಶಲಗಳನ್ನು ಉತ್ತಮಪಡಿಸಿಕೊಳ್ಳಿ.

11. T - Take things as they come. Tackle one problem at a time. Have small Targets.
ಜೀವನ ಘಟನೆಗಳನ್ನು ಸ್ವೀಕರಿಸಿ. ಒಮ್ಮೆಗೆ ಒಂದು ಸಮಸ್ಯೆಯನ್ನು ಎದುರಿಸಿ.

12. H - Healthy Life Style - Food - Exercise - Good Living Environment, Treatment for health problems.
ಸೊಪ್ಪು ತರಕಾರಿ ಹಾಲು ಹಣ್ಣು ಇರುವ ಆಹಾರವನ್ನು ಹಿತಮಿತವಾಗಿ, ವೇಳೆ ವೇಳೆಗೆ ಸರಿಯಾಗಿ ಸೇವಿಸಿ. ಸ್ವಚ್ಛತೆ ಬಗ್ಗೆ ಗಮನಕೊಡಿ. ನಿತ್ಯ ವ್ಯಾಯಾಮ ಮಾಡಿ. ಒಬ್ಬ ವೈದ್ಯರ ಮಾರ್ಗದರ್ಶನದಲ್ಲಿ ಆರೋಗ್ಯವನ್ನು ಕಾಪಾಡಿಕೊಳ್ಳಿ.

ಡಾ. ಸಿ. ಆರ್. ಚಂದ್ರಶೇಖರ್
ಮನೋವೈದ್ಯರು
ನಿಮಾನ್ಸ್, ಬೆಂಗಳೂರು ದೂರವಾಣಿ : 2699 5059

Regn. No. 040155/83
Regn. No. TECH/47-202/MBI-2002
Date of Posting : 10-1-2003

## ಬದುಕು ಕಾವ್ಯಕ್ಕಿಂತ ದೊಡ್ಡದು -ದುಂಡಿರಾಜ್

ಕವಿ ತನ್ನ ಕಾವ್ಯದ ಮೂಲಕ ಬದುಕನ್ನು ಅರ್ಥೈಸಲು ಪ್ರಯತ್ನಿಸುತ್ತಾನೆ. ಬದುಕು ಕಾವ್ಯಕ್ಕಿಂತ ದೊಡ್ಡದು, ಬದುಕನ್ನು ಅರ್ಥಮಾಡಿಕೊಳ್ಳಲು ಸಾಹಿತ್ಯ ನೆರವಿಗೆ ಬರುತ್ತದೆ. ಸಾಹಿತ್ಯದಿಂದ ಸುತ್ತಣಬದುಕು ಸಹ್ಯವಾಗುತ್ತದೆ ಎಂದು ಕವಿ ದುಂಡಿರಾಜ್ ಅವರು ಅಭಿಪ್ರಾಯಪಟ್ಟರು. ಅವರು ಇತ್ತೀಚೆಗೆ ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗವು ಆಯೋಜಿಸಿದ್ದ ಕಾವ್ಯ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು. ಸಾಹಿತ್ಯದಿಂದ ಕ್ರಾಂತಿಯಾಗ ದಿದ್ದರೂ ಅದರಿಂದ ಅಪಾಯವಂತೂ ಇಲ್ಲ. ಕನ್ನಡದಲ್ಲಿ ಒಳ್ಳೆಯ ಸಾಹಿತ್ಯ ರಚನೆಯಾಗಿದೆ. ಅದನ್ನು ಓದುವ ಅರ್ಥೈಸಿಕೊಳ್ಳುವ ಕೆಲಸ ನಮ್ಮದು ಎಂದವರು ನುಡಿದರು. ತಾನು ಕವಿಯಾದ ಬಗೆಯನ್ನು ಸ್ವಾರಸ್ಯಪೂರ್ಣವಾಗಿ ಇದೇ ಸಂದರ್ಭದಲ್ಲಿ ಅವರು ವಿವರಿಸಿದರು. ಹಿರಿಯ ರಂಗತಜ್ಞ, ಸಿನಿಮಾ ನಿರ್ದೇಶಕ ಶ್ರೀ ಸದಾನಂದ ಸುವರ್ಣ ಅವರು ಮಾತನಾಡುತ್ತಾ ನಾನು ಕಮರ್ಶಿಯಲ್ ಸಿನಿಮಾದವನಲ್ಲ. ಸದಭಿರುಚಿಯ ಸಿನಿಮಾದಲ್ಲಿ ನಂಬಿಕೆಯಿಟ್ಟವನು. ಕಲಾತ್ಮಕ ಸಿನಿಮಾ ಯಾವತ್ತೂ ವಾಸ್ತವಕ್ಕೆ, ನಿಜಜೀವನಕ್ಕೆ ಹತ್ತಿರವಾದುದು. ಸಾಹಿತ್ಯದಿಂದ, ಅವುಗಳನ್ನೇ ಮೂಲ ಆಕರವನ್ನಾಗಿಟ್ಟುಕೊಂಡು ಸಿನಿಮಾ ತಯಾರಿಸಿ ಹೊಸ ಪ್ರೇಕ್ಷಕವರ್ಗವನ್ನು ಹುಟ್ಟುಹಾಕುವ ಪ್ರಯತ್ನವನ್ನು ಎಪ್ಪತ್ತರ ದಶಕದಲ್ಲಿ ಗೆಳೆಯರೆಲ್ಲ ಸೇರಿ ಮಾಡಿದೆವು. ಸಾಹಿತ್ಯ ಕಥೆಗೆ ಬದ್ಧವಾಗಿ, ಅದರ ಆಶಯಕ್ಕೆ ಧಕ್ಕೆ ಬಾರದ ಹಾಗೆ ಸಿನಿಮಾ ತಯಾರಿಸಿ ಪ್ರೇಕ್ಷಕರ ವರ್ಗದಿಂದ ಸೈ ಎನಿಸಿಕೊಂಡಿದ್ದೇವೆ ಎಂಬ ಸಮಾಧಾನ ನಮಗಿದೆ. ಈಗ ಆ ಪರಂಪರೆ ನಿಂತುಹೋಗಿದೆ. ಸಿನಿಮಾ ಮಾಧ್ಯಮಕ್ಕೂ ಒಂದು ಭಾಷೆ ಹಾಗೂ ವ್ಯಾಕರಣವೆಂಬುದಿದೆ. ಸಿನಿಮಾ ನಿರ್ದೇಶಕರು, ತಯಾರಕರು ಚಿತ್ರಮಾಧ್ಯಮವನ್ನು ಚೆನ್ನಾಗಿ ಬಲ್ಲವರಾಗಿರಬೇಕು. ಒಳ್ಳೆಯ ಸಿನಿಮಾ, ನಾಟಕಕ್ಕೆ ಯಾವತ್ತೂ ಪ್ರೇಕ್ಷಕರಿದ್ದಾರೆ. ಎಂದವರು ಕಳೆದ ಐದು ದಶಕಗಳ ತಮ್ಮ ಸಿನಿಮಾ ಹಾಗೂ ರಂಗ ಭೂಮಿಯ ನೆನಪುಗಳನ್ನು ಹಂಚಿಕೊಂಡರು.

ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ ಪ್ರೊ. ತಾಳ್ತಜೆ ವಸಂತಕುಮಾರ ಅವರು ಒಂದು ಕವಿತೆ ನಮ್ಮಲ್ಲಿ ಆಂದೋಲನವನ್ನು ಓದಿದ ತಕ್ಷಣ ಉಂಟು ಮಾಡಬೇಕು, ಕವಿ ಹಣೆಪಟ್ಟಿ ಹಚ್ಚಿ ಬರೆಯುವುದರಲ್ಲಿ. ಡಾ. ಜಿ. ಎನ್. ಉಪಾಧ್ಯ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಕೃಷ್ಣಮೂರ್ತಿ ಕಲುಮಂಗಿ ಅವರು ಕಾರ್ಯಕ್ರಮ ನಿರೂಪಿಸಿದರು. ಸಾಹಿತ್ಯ ಸಂವಾದ ಕಾರ್ಯಕ್ರಮದಲ್ಲಿ ಪ್ರೊ. ವೆಂಕಟೇಶ ಪೈ, ಸುಬ್ರಹ್ಮಣ್ಯ ಭಟ್ ಮೊದಲಾದವರು ಪಾಲ್ಗೊಂಡರು.

## ವಡಾಲದ ರಾಷ್ಟ್ರೀಯ ಕನ್ನಡ ಶಾಲೆಯಲ್ಲಿ ಜಸ್ಟೀಸ್ ಶ್ರೀಕೃಷ್ಣರಿಗೆ ಸನ್ಮಾನ ಶಿಸ್ತು ಮತ್ತು ಸಮಯ ಪ್ರಜ್ಞೆಯನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಯೋಗ್ಯ ನಾಗರಿಕನಾಗಲು ಸಾಧ್ಯ - ಶ್ರೀಕೃಷ್ಣ

ಜೀವನದಲ್ಲಿ ಹಣಗಳಿಸುವುದೊಂದೇ ಮುಖ್ಯ ಉದ್ದೇಶವನ್ನಾಗಿ ಇಟ್ಟುಕೊಳ್ಳದೆ ದೇಶದ ಉತ್ತಮ ಪ್ರಜೆಯಾಗಿ ಇತರರಿಗೂ ಮಾರ್ಗದರ್ಶಕರಾಗಲು ಪ್ರಯತ್ನಿಸಬೇಕು ಆಸ್ತಿಯ ಶ್ರೀಮಂತಿಕೆ ಸ್ಥಿರವಲ್ಲ. ವಿದ್ಯೆ, ಶಿಸ್ತು ಮಾನವೀಯತೆಯ ಕೊನೆಯವರೆಗೂ ಶಾಶ್ವತವಾದುದು ಉತ್ತಮ ಶಿಕ್ಷಣ ಪಡೆದು ಕೇವಲ ಸರ್ಟಿಫಿಕೇಟುಗಳನ್ನು ಪಡೆದುಕೊಂಡರೆ ಸಾಲದು ಅದರೊಂದಿಗೆ ನಮ್ಮ ಜೀವನಕ್ಕೆ ಅತ್ಯಾವಶ್ಯಕವಾಗಿರುವ ಶಿಸ್ತನ್ನು ಅಳವಡಿಸಿಕೊಂಡು ದೇಶದ ಸತ್ಪ್ರಜೆಯಾಗಿ ಬಾಳಲು ಕಲಿಯಬೇಕು ಎಂದು ಸುಪ್ರೀಂಕೋರ್ಟಿನ ನ್ಯಾಯಾಧೀಶ ಜಸ್ಟಿಸ್ ಬಿ.ಎನ್. ಶ್ರೀ ಕೃಷ್ಣರವರು ತಿಳಿಸಿದರು.

ಅವರು ಜನವರಿ 3 ಶುಕ್ರವಾರದಂದು ವಡಾಲದ ರಾಷ್ಟ್ರೀಯ ಕನ್ನಡ ಶಾಲೆಯ ಸಭಾಂಗಣದಲ್ಲಿ ಶಾಲೆ ಹಾಗೂ ಶಾಲಾ ಆಡಳಿತ ಸಮಿತಿಯ ವತಿಯಿಂದ ಜರುಗಿದ ಸನ್ಮಾನವನ್ನು ಸ್ವೀಕರಿಸಿ ಹಾಗೂ ಅಂದು ನಿವೃತ್ತರಾಗುವ ಶಿಕ್ಷಕಿಯರನ್ನು ಸನ್ಮಾನಿಸಿ ಮುಖ್ಯ ಅತಿಥಿ ಸ್ಥಾನದಿಂದ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ಮಕ್ಕಳು ಸಮಯ ಪ್ರಜ್ಞೆಯ ಬಗ್ಗೆ ಕಾಳಜಿಯನ್ನು ವಹಿಸಿಕೊಂಡು ವಿದ್ಯಾಭ್ಯಾಸ ಕ್ರೀಡೆ ಹಾಗೂ ಇತರ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸಿ ನಿರ್ದಿಷ್ಟ ಗುರಿಯತ್ತ ಸಾಗಿದಾಗ ದೇಶದ ಯೋಗ್ಯ ನಾಗರಿಕನಾಗಲು ಸಾಧ್ಯ ಇದನ್ನು ನಾನು ಕಲಿತ ಈ ಶಾಲೆಯು ಹೇಳಿಕೊಟ್ಟಿದೆ. ದೇಶದ ಉನ್ನತ ಹುದ್ದೆಗಳಲ್ಲಿ ಒಂದಾದ ಸುಪ್ರೀಂಕೋರ್ಟಿನ ನ್ಯಾಯಾಧೀಶರ ಹುದ್ದೆಯನ್ನು ಪ್ರಾಪ್ತಿಸಿಕೊಳ್ಳಲು N.K.E.S. ಶಾಲೆಯೇ ಕಾರಣ ಎಂದು ತಿಳಿಸುತ್ತಾ ಇದರ ಸಂಪೂರ್ಣ ಯಶಸ್ಸು, ಶ್ರೇಯಸ್ಸು ನನಗೆ ಕಲಿಸಿದ ಶಿಕ್ಷಕ ವರ್ಗಕ್ಕೆ ಸಲ್ಲಬೇಕು.ತನ್ನಂತೆಯೇ ನೀವೂ ದೇಶದ ಉನ್ನತ ಹಂತದ ಹುದ್ದೆಯನ್ನು ಅಲಂಕರಿಸಿ ತಂದೆ ತಾಯಿಗಳ ಗುರುಹಿರಿಯರ ಹಾಗೂ ಶಾಲೆಯ ಹೆಸರನ್ನು ದೇಶದೆಲ್ಲೆಡೆ ಹರಡಲು ಕಾರಣರಾಗಿರಿ ಎಂದು ತಿಳಿಸುತ್ತಾ ವಿದ್ಯಾರ್ಥಿಗಳ ಭವ್ಯ ಭವಿಷ್ಯಕ್ಕಾಗಿ ಶುಭ ಹಾರೈಸಿದರು.

ಸಭಾ ಕಾರ್ಯಕ್ರಮವು ವಿದ್ಯಾರ್ಥಿಗಳ ಪ್ರಾರ್ಥನೆಯೊಂದಿಗೆ ಪ್ರಾರಂಭಗೊಂಡಿತು. ಆಗಮಿಸಿದ ಅಭ್ಯಾಗತರನ್ನು ಶಾಲಾ ಕಾರ್ಯಕಾರಿ ಸಮಿತಿಯ ಕಾರ್ಯದರ್ಶಿ ಶ್ರೀ ಎಸ್. ಸುಬ್ರಮಣಿಯವರು ಸ್ವಾಗತಿಸಿದರೆ ಶಿಕ್ಷಕಿ ಉಮಾ ಮಹೇಶ್ವರಿಯವರು ಸನ್ಮಾನಿತರಾದ ಜಸ್ಟೀಸ್ ಶ್ರೀ ಕೃಷ್ಣರ ಅಭಿನಂದನಾ ಭಾಷಣಗೈದರೆ ಶಾಲಾ ಕಾರ್ಯಕಾರಿ ಸಮಿತಿಯ ಅಧ್ಯಕ್ಷೆ ಶ್ರೀಮತಿ ಲೀಲಾ ರಾಜಕುಮಾರ್ ಹಾಗೂ ಮೈಸೂರು ಎಸೋಸಿಯೇಷನ್ನಿನ ಕಾರ್ಯದರ್ಶಿಗಳಾದ ಎಂ.ಎನ್. ಪ್ರಸಾದರವರು ಅಭಿನಂದನೆಗಳನ್ನು ಈ ಸಂದರ್ಭದಲ್ಲಿ ಸಲ್ಲಿಸಿದರು.

ಕಳೆದ 30 ವರ್ಷಗಳಿಂದ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತರಾದ ಶ್ರೀಮತಿ ಅನಸೂಯ ಅಕಾಚಾರ್ಯ ಹಾಗೂ ಶ್ರೀಮತಿ ಸುಧಾ ರಾವ್‌ರವರ ಕುರಿತು ಶಾಲಾ ಶಿಕ್ಷಕರಾದ ಶ್ರೀ ದಯಾನಂದ ಪೂಜಾರಿ ಹಾಗೂ ಅಮರೇಶ ಪಾಟೀಲರು ಕಾವ್ಯ ರೂಪದ ಮುಖಾಂತರ ನಿವೃತ್ತರಿಗೆ ಅಭಿನಂದನೆ ಸಲ್ಲಿಸುತ್ತಾ ಶುಭ ಹಾರೈಸಿದರು.

ಜಸ್ಟೀಸ್ ಶ್ರೀ ಕೃಷ್ಣ ಅವರನ್ನು ಶಾಲಾ ಕಾರ್ಯಕಾರಿ ಸಮಿತಿಯ ಅಧ್ಯಕ್ಷೆ ಶ್ರೀಮತಿ ಲೀಲಾ ರಾಜಕುಮಾರ್ ಕಾರ್ಯದರ್ಶಿ ಶ್ರೀ ಎಸ್. ಸುಬ್ರಮಣಿ ಕೋಶಾಧಿಕಾರಿ ಶ್ರೀ ಕೆ. ಎನ್. ಕೀರ್ತಿ, ಉಪಾಧ್ಯಕ್ಷ ಪಿ. ಕೆ. ಸಾಲ್ಯಾನ್ ಹಾಗೂ ಶಾಲಾ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸರೋಜ ರಾವ್‌ರವರು ಫಲಪುಷ್ಪ, ನೆನಪಿನ ಕಾಣಿಕೆ ನೀಡಿ ಶಾಲು ಹೊದಿಸಿ ಸನ್ಮಾನಿಸಿದರು. ಶ್ರೀಮತಿ ಪೂರ್ಣಿಮ ಶ್ರೀಕೃಷ್ಣರವರನ್ನು ಮಾಧ್ಯಮಿಕ ಹಾಗೂ ಪ್ರಾಥಮಿಕ ವಿಭಾಗದ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸರೋಜ ರಾವ್ ಹಾಗೂ ಶ್ರೀಮತಿ ಬೆನಡಿಕ್ಟಾ ಪೆರ್ನಾಂಡಿಸ್ ಹಾಗೂ ಶ್ರೀಮತಿ ಲೀಲಾ ರಾಜಕುಮಾರ್ ಸನ್ಮಾನಿಸಿದರೆ, ನಿವೃತ್ತ ಶಿಕ್ಷಕಿಯರನ್ನು ಜಸ್ಟಿಸ್ ಕೃಷ್ಣರವರು ಫಲಪುಷ್ಪ, ನೆನಪಿನ ಕಾಣಿಕೆ ನೀಡಿ ಶಾಲು ಹೊಚಿಸಿ ಸನ್ಮಾನಿಸಿದರು. ಸನ್ಮಾನಿತರು ಸಂದರ್ಭೋಚಿತವಾಗಿ ಮಾತನಾಡುತ್ತಾ ಸಂಸ್ಥೆಗೆ ಕೃತಜ್ಞತೆ ಹಾಗೂ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಕೊನೆಯಲ್ಲಿ ಶಿಕ್ಷಕ ಅಮರೇಶ ಪಾಟೀಲರು ಧನ್ಯವಾದವಿತ್ತರು.

ಜಸ್ಟಿಸ್ ಶ್ರೀ ಕೃಷ್ಣ ಶಾಲೆಯ ಕಂಪ್ಯೂಟರ್ ಹಾಗೂ ವಾಚನಾಲಯಗಳಿಗೆ ಭೇಟಿಯಿತ್ತು ಶಾಲೆಯ ಪ್ರಗತಿಯ ಬಗ್ಗೆ ಪ್ರಶಂಸಿಸಿದರು.

ಈ ಸಂದರ್ಭದಲ್ಲಿ ಶ್ರೀಮತಿ ಪೂರ್ಣಿಮ ಶ್ರೀಕೃಷ್ಣ, ಜಗನ್ನಾಥ್ ನಾಯಕ, ಡಾ। ಸದಾನಂದ ಶೆಟ್ಟಿ, ಎಸ್, ಸುಬ್ರಮಣಿ, ಲೀಲಾ ರಾಜಕುಮಾರ್, ಕೆ.ಎನ್. ಕೀರ್ತಿ ಹಾಗೂ ಪಿ.ಕೆ. ಸಾಲ್ಯಾನ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

Edited, Printed & Published by M.A.N. Prasad, On behalf of the Mysore Association, Mumbai. Tel.: 2402·4647
Printed at Aarati Art Printers, Fort, Mumbai-400 001. * 2266 3361 / 2266 5938